ಬೆಲೆ ರೂ.2.50
D.O.P - 15th of every month at Udupi Head Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಅಕ್ಟೋಬರ್ 2021

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2958444
ಸಂಪುಟ-21 ಸಂಚಿಕೆ-10 ಪುಟಗಳು-6 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಶ್ರೀ ಶಾರದಾ ದೇವಸ್ಥಾನದಲ್ಲಿ ನವರಾತ್ರಿ ಸಂಭ್ರಮ

ಆಶ್ವಯುಜ ಮಾಸ ಶುಕ್ಲ ಪಕ್ಷದ ಮೊದಲ ದಿನ (ಪಾಡ್ಯ)ದಂದು ಶರನ್ನವರಾತ್ರಿ ಆರಂಭ. ಅಂದಿನಿಂದ ಆರಂಭಗೊಂಡು ನವಮಿಯುವರೆಗಿನ ಒಂಬತ್ತು ದಿನಗಳು ಶಕ್ತಿಸ್ವರೂಪಿಣಿಯಾದ ದೇವಿ ಆರಾಧನೆಗೆ ವಿಶೇಷವಾದ ದಿನಗಳು. ಭೌತಿಕ/ದೇಹಶಕ್ತಿ, ಧನಶಕ್ತಿ ಹಾಗೂ ವಿದ್ಯಾಶಕ್ತಿಗಳ ರೂಪದಲ್ಲಿರುವ ದೇವಿಯನ್ನು (ದುರ್ಗೆ-ಭೌತಿಕ ಶಕ್ತಿ, ಲಕ್ಷ್ಮಿ-ಧನ, ಸರಸ್ವತಿ-ವಿದ್ಯೆ) ಒಂದೊಂದು ಶಕ್ತಿಗೆ ಮೂರು ಮೂರು ದಿನಗಳಂತೆ ಪೂಜಿಸಲಾಗುತ್ತದೆ.

ನವರಾತ್ರಿಯು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘಕ್ಕೆ ವಿಶೇಷವಾದ ಹಬ್ಬ. ಅದನ್ನು ನಾವು ನಾಡಹಬ್ಬದಂತೆ ಸಂಭ್ರಮದಿಂದ ಆಚರಿಸುತ್ತೇವೆ.





ತಾ.07-10-2021ರಂದು ನವರಾತ್ರಿಯ ಪೂಜೆಗಳು ವಿಧ್ಯುಕ್ತವಾಗಿ ಆರಂಭಗೊಂಡವು. ಶ್ರೀ ಶಾರದಾ ದೇವಸ್ಥಾನ ಹಾಗೂ ಶ್ರೀ ಶಾರದಾ ಮಂಟಪವನ್ನು ತಳಿರು ತೋರಣಗಳಿಂದ ಹಾಗೂ ವಿದ್ಯುದ್ದೀಪಗಳಿಂದ ಅಲಂಕರಿಸಲಾಗಿತ್ತು. ಶ್ರೀ ಶಾರದೆಯ ಪೀಠವನ್ನು ಬೆಳ್ಳಿಯ ಪ್ರಭಾವಳಿಯಿಂದ ಅಲಂಕರಿಸಿ, ದೇವಿಯನ್ನು ಬಂಗಾರದ ಒಡವೆಗಳಿಂದ ಹಾಗೂ ವಿವಿಧ ಪುಷ್ಪಗಳಿಂದ ಅರ್ಚಿಸಿ ಪೂಜಿಸಲಾಯಿತು.

ಪ್ರತೀ ದಿನ ಸಂಜೆ ದುರ್ಗಾನಮಸ್ಕಾರ ಪೂಜೆಯುನ್ನೂ ನೆರವೇರಿಸಿಕೊಂಡು ಬರಲಾಯಿತು. ಪ್ರತೀ ದಿನ ಕನಿಷ್ಠ ಮೂರರಂತೆ ಭಕ್ತರು ಸೇವೆಯನ್ನು ಪ್ರಾಯೋಜಿಸಿದ್ದರು. ಸಮಾಜ ಬಾಂಧವರು ಹಾಗೂ ಪರಿಸರದ ಭಕ್ತರು ಈ ವಿಶೇಷ ದಿನಗಳಲ್ಲಿ ಭಜನೆ, ಪಾರಾಯಣ, ಹೂವಿನ ಪೂಜೆಗಳಲ್ಲಿ ಭಕ್ತಿಭಾವದಿಂದ ಪಾಲ್ಗೊಂಡರು. ಶ್ರೀ ದೇವಿಗೆ ಅನೇಕ ಭಕ್ತರು ಸೀರೆಗಳನ್ನು ಕಾಣಿಕೆಯಾಗಿ ಸಮರ್ಪಿಸಿದರು. ಅನೇಕ ಭಕ್ತರು ತಮ್ಮ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಿದರು.

ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಪ್ರಭಾರ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ, ಕೋಶಾಧಿಕಾರಿ ಶ್ರೀ ಜಯರಾಮ ರಾವ್, ಆಡಳಿತ ಮಂಡಳಿಯ ಸದಸ್ಯರು, ಯುವ ವೇದಿಕೆಯ ಕಾರ್ಯಕರ್ತರು ಪ್ರತಿದಿನವೂ ಹಾಜರಿದ್ದು ಸೇವಾ ಕಾರ್ಯದ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. ಮಹಿಳಾ ವೇದಿಕೆಯಿಂದ ಪ್ರತಿದಿನವೂ ಭಜನೆ, ಸೌಂದರ್ಯಲಹರಿ ಹಾಗೂ ಲಲಿತಾಸಹಸ್ರ ನಾಮ ಪಾರಾಯಣ ನಡೆಯಿತು.

## ಮೂಡುಬಿದ್ರಿ ಸಂಘದ 33ನೇ ವಾರ್ಷಿಕೋತ್ಸವ



ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ (ರಿ.) ಮೂಡುಬಿದ್ರಿ ಇದರ 33ನೇ ವರುಷದ ವಾರ್ಷಿಕ ಮಹಾಸಭೆ, ಧಾರ್ಮಿಕ ಕಾರ್ಯಕ್ರಮ, ಸಮ್ಮಾನ, ಸೌಹಾರ್ದ ಕೂಟ, ಸಾಂಸ್ಕೃತಿಕ ಕಾರ್ಯಕ್ರಮಗಳು ಸಪ್ಟೆಂಬರ್ ತಿಂಗಳ ದಿನಾಂಕ 12ರ ಆದಿತ್ಯವಾರ ಮೂಡುಬಿದ್ರಿ ಅಲಂಗಾರ್ ಶ್ರೀ ಜಯರಾಮ ರಾವ್ ಅವರ ಮನೆ 'ಅನುಗ್ರಹ'ದಲ್ಲಿ ಪರಿಷತ್ತು ಅಧ್ಯಕ್ಷರೂ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಅಧ್ಯಕ್ಷರೂ ಆದ ಗೌರವಾನ್ವಿತ ಶ್ರೀ ಎಂ. ದೇವಾನಂದ ಭಟ್ ಬೆಳ್ವಾಯಿ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳಿಗ್ಗೆ ಗಂಟೆ 8:00ರಿಂದ ಪಾವಂಜೆ ಶ್ರೀ ದೇವರಾಜ್ ಹೆಬ್ಬಾರ್ ಅವರ ಪೌರೋಹಿತ್ಯದಲ್ಲಿ "ಶ್ರೀಸತ್ಯ ವಿನಾಯಕ ಪೂಜೆ", ಶ್ರೀ ಆದಿಶಂಕರ ಭಜನಾ ಮಂಡಳಿಯ ಮಾತೆಯರಿಂದ ಭಜನಾ ಕಾರ್ಯಕ್ರಮ, ಮಂಗಳಾರತಿ, ಪ್ರಸಾದವಿತರಣೆ ಹೀಗೆ ಮುಂದುವರಿದು ಗಂಟೆ 11:30ಕ್ಕೆ ಸರಿಯಾಗಿ "ಕೀರ್ತಿಶೇಷ ಬಿ.ನಾರಾಯಣ ರಾವ್ ಮತ್ತು ವಿಮಲ ಎನ್.ರಾವ್ ವೇದಿಕೆ"ಯಲ್ಲಿ ಮಹಾಸಭೆ ಆರಂಭಗೊಂಡು ನಮ್ಮ ಸಮಾಜದ ಹಿರಿಯ ಮುಂದಾಳು ಮಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರದ ನಿವೃತ್ತ ಅಧಿಕಾರಿ ಎಂ.ಆರ್.ವಾಸುದೇವರವರು ದೀಪ ಪ್ರಜ್ವಲನೆಯ ಮೂಲಕ ಉದ್ಘಾಟನೆಗೊಳಿಸಿ ನಮ್ಮ ನಾಡು, ನುಡಿ, ಸಂಸ್ಕೃತಿ, ಮೂಲ ಸಂಸ್ಕೃತ ಭಾಷೆ ಬಗ್ಗೆ ಮುಖ್ಯವಾಗಿ ಆಧುನಿಕ ಯುಗದಲ್ಲಿ ಬ್ರಾಹ್ಮಣ್ಯವನ್ನು ಕಾಪಿಟ್ಟುಕೊಂಡು ಬರುವ ಜಾಗ್ರತಿಯ ಬಗ್ಗೆ ಮನಮುಟ್ಟುವಂತೆ ವಿವರಿಸಿದರು. ಅಭ್ಯಾಗತರಾದ ಬಂಟ್ವಾಳ ಸಂಘದ ನಿಕಟಪೂರ್ವ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಂತೋಷ್ ಕವಾಳಕಟ್ಟೆ ಅವರು ಭಾಗವಹಿಸಿ ನಾವೆಲ್ಲರೂ ಒಂದಾಗಿ ಬೆರೆತು ಸಹಬಾಳ್ವೆಯಿಂದ ಮುನ್ನಡೆದು ಸಮಾಜ ಕಟ್ಟಲು ಪ್ರಯತ್ನಪಟ್ಟರೆ ಮಾತ್ರ ನಮಗೆ ಸ್ಥಾನ-ಮಾನ ದೊರೆಯುತ್ತದೆ. ಆ ನೆಲೆಯಲ್ಲಿ ನಮ್ಮವರು ಶ್ರಮಿಸುತ್ತಿರುವುದು ಶ್ಲಾಘನೀಯ ಎಂದು ಶುಭ ನುಡಿದರು. ಸಮಾಜದ ಹಿರಿಯ ನಾಗರಿಕರ ನೆಲೆಯಲ್ಲಿ ಕಟೀಲು ಶ್ರೀ ಭವಾನಿಶಂಕರ ರಾವ್ ದಂಪತಿಗಳನ್ನು ಸನ್ಮಾನಿಸಲಾಯಿತು. 2020-21 ರ ಸಾಲಿನಲ್ಲಿ 10ನೇ ತರಗತಿ, ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 80% ಕ್ಕಿಂತ ಹೆಚ್ಚು ಅಂಕ ಪಡೆದ ಮಕ್ಕಳನ್ನು ನಗದು ನೀಡಿ ಗೌರವಿಸಲಾಯಿತು. ಜೊತೆಗೆ ಪ್ರಸ್ತುತ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 600ರಲ್ಲಿ 600 ಅಂಕ ಗಳಿಸಿದ ಪುತ್ತಿಗೆ ಶ್ರೀನಿವಾಸ ರಾವ್ ದಂಪತಿಗಳ ಸುಪುತ್ರಿ ಕುಮಾರಿ ಭೂಮಿಕಾಳನ್ನು ವಿಶೇಷವಾಗಿ ಸಮ್ಮಾನಿಸಲಾಯಿತು. ಪರಿಷತ್ತಿನ ಗೌರಧ್ಯಕ್ಷರಾದ ಸುರೇಶ್ ರಾವ್ ಲಾಡಿ, ಹಿರಿಯ ಮಾರ್ಗದರ್ಶಕರು ಶ್ರೀ ರಾಯಿ ರಾಜಕುಮಾರ್ ರಾವ್ ಉಪಸ್ಥಿತರಿದ್ದ ಸಭೆಯಲ್ಲಿ ಬೊಕ್ಕಸ ಚಂದ್ರಶೇಖರ ರಾವ್ ಅಭ್ಯಾಗತರನ್ನು ಸ್ವಾಗತಿಸಿದರೆ, ವಾರ್ಷಿಕ ಲೆಕ್ಕಪತ್ರಗಳನ್ನು ಪರಿಷತ್ತು ಕೋಶಾಧಿಕಾರಿಗಳಾದ ಶ್ರೀ ವಸಂತ ರಾಜ್ ಬಿ. ಕೆ. ಮಂಡಿಸಿ ಮಂಜೂರಾತಿಗೊಳಿಸಿದರು. ಸಮಾಜದಲ್ಲಿ ಸಂದುಹೋದ ಹಿರಿಯ ಚೇತನಗಳಿಗೆ ಮೌನಪ್ರಾರ್ಥನೆಯೊಂದಿಗೆ ಶ್ರದ್ಧಾಂಜಲಿಯನ್ನು ಬೊಕ್ಕಸ ಶ್ರೀ ಜಯರಾಮ್ ರಾವ್ ನೆರವೇರಿಸಿದರು. ಕಟೀಲು ಶ್ರೀ ಮಂಜುನಾಥ್ ರಾವ್ ಕಾರ್ಯಕ್ರಮದ ನಿರೂಪಣೆಯಲ್ಲಿ ಸಹಕರಿಸಿದರೆ ಪ್ರಧಾನ ಕಾರ್ಯದರ್ಶಿ ಶ್ರೀ ಸುರೇಶ್ ರಾವ್ ಬಿ. ಧನ್ಯವಾದವಿತ್ತರು. ಸಮಾಜ ಬಾಂಧವರು ಮನೆಯಲ್ಲಿ ತಾವೇ ತಯಾರಿಸಿದ ಸಾಮಾನ್ಯ 40 ಬಗೆಯ ತಿಂಡಿ ತಿನಸುಗಳು ಎಲ್ಲರ ಮನಗೆದ್ದಿತ್ತು. ಊಟದ ಬಳಿಕ ಕಾರ್ಕಳ ಶ್ರೀ ಅನಂತಪದ್ಮನಾಭ ಭಟ್ ಇವರಿಂದ ಹರಿಕಥಾಕಾಲಕ್ಷೇಪ "ಭಕ್ತ ಸುಧಾಮ" ಸಂಪನ್ನಗೊಂಡಿತು.

ವರದಿ : ಸುರೇಶ್ ರಾವ್ ಬೊಕ್ಕಸ


### ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 10.00% (ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11% |

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)


2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ


ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ

### HARIKRISHNA DIGITALS

5-244-A1, SRIRANGA, First Floor, V. P. Nagar, 3rd Main, Kunjibettu Post - 576102, Udupi District



WE UNDERTAKE
* All types Outdoor and Indoor Photography & Videography
* Pre-wedding shoot * Post-wedding shoot * Passport Photography
* Photo Frames * Digital album creations
* Digitalisation of Old album
* Athorised Udayavani Advertisement Agency
* Offset, Screen, Digital & Banner Printing
* All types of Invitations * Project works of Schools & Colleges
* Book design & printing * Visiting cards
* A4 and A3 Black-White and Colour Printing and Xerox



+91 94487 24161, +91 94816 10371, +91 7019367390 E-mail : harikrishnadigitals2003@gmail.com

# ಗಣಪತಿ ಮತ್ತು ನವರಾತ್ರಿ ಹಬ್ಬಗಳು

ಲೇಖನ : ವೈ.ಮೋಹನ ರಾವ್
ಅಂಚೆಚೀಟಿ ಸಂಗ್ರಹ : ಕೃಷ್ಣಯ್ಯ ಎಂ.ಕೆ.



**ಯಕ್ಷಗಾನದಲ್ಲಿ ಗಣಪತಿ ಪ್ರಾರ್ಥನೆಯ ಒಂದು ಸೊಲ್ಲು :**

*ರಾಗ-ನಾಟಿ ತ್ರಿವುಡೆ ತಾಳ*
*ಗಜಮು ಖದ ವಗೆ*
*ಗಣಪ ಗೇ. ..*
*ಬೆ.. ಳ್ಗಿ. .ಯ*
*ಉಲಿ. ಗೆ. .ಜ್ಜೆ*
*ಗಳ. ಕ. .ಟ್ಟಿ*
*ಕುಣಿ. ವಂ. .ಥ*
*... .. ಗೆಜ್ಜೆ*
*ಗಳ. ಕ. .ಟ್ಟಿ*
*ಕುಣಿ. ವಂ. .ಥ*
*ಡೊ.. ಳ್ಳಿ. .ನ*
*ಗಣಪ ಗೇ. .ಆ*
*ರತಿ. ಎ. .ತ್ತಿ*
*ರೇ.. .. .ಆ*
*ರತಿ. ಬೆಳ .ಗಿ*
*ರೇ.. .. ..*
*ಗಜಮು ಖದ ವಗೆ*
*ಗಣಪ ಗೇ. ..*

'ಶ್ರೀ ಗಣೇಶಾಯ ನಮಃ' ಎಂದು ಯಾವುದೇ ಕೆಲಸಕ್ಕೂ ಪ್ರಥಮ ಗಣೇಶ ಪೂಜೆ ತಾನೇ. ಈ ವಿಘ್ನೇಶ ವಂದನೆ ಎಲ್ಲ ಚಟುವಟಿಕೆಗಳ ಆರಂಭಕ್ಕೂ ಸಾರ್ವತ್ರಿಕ ಸಂಪ್ರದಾಯವಾಗಿ ಬೆಳೆದು ಬಂದಿದೆ. ವಿದ್ಯಾರಂಭ, ನಾಮಕರಣ, ಉಪನಯನ, ವಿವಾಹ, ಕೆರೆ ಬಾವಿ ಗೃಹ ನಿರ್ಮಾಣ, ಸಂಗೀತ, ಕಲೆ, ಸಾಹಿತ್ಯ, ಸಂಕಟ, ಸಂಗ್ರಾಮ ಮತ್ತು ಇನ್ನಿತರ ಎಲ್ಲಾ ಶುಭ ಕಾರ್ಯಗಳಲ್ಲಿ ವಿನಾಯಕನಿಗೆ ವಿನಾಯತಿ ಇಲ್ಲದೆ 21 ನಮಸ್ಕಾರಗಳು ಸಲ್ಲುತ್ತವೆ.

'ಲಂಬೋದರ ಲಕುಮಿಕರ' ಗೀತೆ ಸಂಗೀತಾಭ್ಯಾಸಿಗಳಿಗೆ ಅಡಿಪಾಯದ ಗೀತೆ, 'ವಾತಾಪಿ ಗಣಪತಿಂ ಭಜೆ'ಯಿಂದ ಸಂಗೀತ ಸಭೆಗಳು ಪ್ರಾರಂಭ. 'ಮುದದಿಂದ ನಿನ್ನ ಕೊಂಡಾಡುವೆನು' ಎಂಬ ಗಣಪತಿ ಸ್ತುತಿ ಪ್ರತಿಯೊಂದು ತಾಳಮದ್ದಲೆ, ಯಕ್ಷಗಾನ ಬಯಲಾಟ ಪ್ರಾರಂಭಕ್ಕೆ ಅಗತ್ಯ. 'ಕರದೊಳು ಪರಶುಪಾಶಾಂಕುಶಧರನಿಗೆ ನಿರತವು ಭಕ್ತರ ಪೊರೆವವಗೆ' ಎಂಬ ಮಂಗಳ ಹಾಡು ಯಕ್ಷಗಾನ ಮೇಳದ ಕೊನೆಯಲ್ಲಿ ಅನಿವಾರ್ಯ. "ಮೊದಲೊಂದಿಪೆ ನಿನಗೆ ಗಣನಾಥ" ಎಂಬ ಭಜನೆಯಂತೂ ಮನೆಮನೆ ಮಾತಾಗಿದೆ.

ಶಿವ ಪಾರ್ವತಿಯವರ ಮಗ ಗಣಪತಿ ಎಂದು ಎಲ್ಲಾ ಕಥೆಗಳ ಒಟ್ಟು ತಾತ್ಪರ್ಯ. ಪಾರ್ವತಿಯ ಶರೀರದ ಮಣ್ಣಿನಿಂದ ಆತನ ಸೃಷ್ಟಿಯಾಯಿತು. ಆತ ಉಮಾಸುತ ಅಥವಾ ಗೌರಿತನಯ. ಆದರೆ ಶಿವನಿಂದಲೇ ಆತನ ಶಿರಛೇದನವಾಗಿ ಕೊನೆಗೆ ತಪ್ಪಿನ ಅರಿವಾಗಿ ಅಪ್ಪನ ಅಪ್ಪಣೆಯಂತೆ ಉತ್ತರದಿಕ್ಕಿನಲ್ಲಿ ಮಲಗಿದ್ದ ಆನೆಯ ತಲೆಯನ್ನು ಕಡಿದು ಜೋಡಿಸಿದುದರಿಂದ ಗಜವದನನಾದ.

ಎರಡು ಮುಖ್ಯ ಶಕ್ತಿಗಳ ಸಂಕೇತವೇ ಗಣಪತಿ. ಮೊದಲನೆಯದಾಗಿ ವಿವಿಧ ವಿಘ್ನಗಳನ್ನು ವಿನಾಶ ಮಾಡುವ ದೇವತೆ. ಆದ್ದರಿಂದ ಯಾವುದೇ ಕಾರ್ಯವನ್ನು ಪ್ರಾರಂಭಿಸುವಾಗ ಮೊದಲು ಗಣಪತಿ ಪೂಜೆ. ಎರಡನೆಯದಾಗಿ ಜನಸಾಮಾನ್ಯರ ನಾಯಕ. ಆದ್ದರಿಂದ ಹಿಂದೂ ಜನರ ಪಂಥಗಳ ಎಲ್ಲಾ ಕೆಲಸಗಳಲ್ಲಿ ಅಗ್ರಪೂಜೆಗೆ ಅರ್ಹನಾಗಿರುವ ಏಕಮಾತ್ರ ಮಹಾನ್ ದೇವತೆ ಗಜಾನನ.

ವಿವಿಧ ದೇವರ ಮೂರ್ತಿಗಳಲ್ಲಿ ನಮ್ಮ ಗಣಪತಿಯದ್ದೇ ವಿಶಿಷ್ಟ ಆಕೃತಿ. ವಿಚಿತ್ರ ಆಕೃತಿಯಾದರೂ ಒಂದೊಂದು ಕೃತಿಗೂ ತನ್ನದೇ ಆದ ಪ್ರಾಮುಖ್ಯತೆಯಿದೆ. ಗಜಮುಖನಾಗಿ ರಾಷ್ಟ್ರನಾಯಕನು. ಅಂದರೆ ಆನೆಯ ಶಕ್ತಿ ಪಡೆದು ಗಣರಾಜ್ಯದ ಅಧಿಪತಿ. ಲಂಬೋದರನಾಗಿ ಸಕಲ ವಿದ್ಯಾ ಸಂಪನ್ನನು. ಅಂದರೆ ಎಲ್ಲಾ ವಿದ್ಯಾರಾಶಿಯನ್ನು ತುಂಬಿಟ್ಟುಕೊಂಡ ವಿದ್ಯಾಧಿಕಾರಿ. ಹೊಟ್ಟೆಗೆ ಸುತ್ತಿಕೊಂಡ ಹಾವು ರಕ್ಷಾಬಂಧನ. ವಿಶಾಲಕಣ್ಣುಗಳು ಎಲ್ಲವನ್ನೂ ಕಾಣಬಲ್ಲವು. ದೊಡ್ಡ ಕಿವಿಗಳು ಎಲ್ಲವನ್ನೂ ಕೇಳುವಷ್ಟು ಸಾಮರ್ಥ್ಯ ಪಡೆದಿವೆ.

ತನ್ನ ಅವಸ್ಥೆಯನ್ನು ನೋಡಿ ನಗಾಡಿದ ಚಂದ್ರನಿಗೆ ಗಣಪತಿ ಸಿಟ್ಟಿನಿಂದ ತನ್ನ ಒಂದು ಹಲ್ಲನ್ನು ಮುರಿದು ಇನ್ನೊಂದು ಹಲ್ಲು ಮಾತ್ರ ಉಳಿದುದರಿಂದ ಏಕದಂತನಾದ. ಆನೆಯ ಎರಡು ಕೈಗಳೂ ಸೇರಿ ಆತ ಚತುರ್ಭುಜನಾದ. ದಂತ, ಪಾಶ, ಅಂಕುಶ, ಅಭಯಹಸ್ತ. ಹೀಗೆ ನಾಲ್ಕೂ ಕೈಗಳಿಗೆ ಕೆಲಸವಿದೆ. ಮಾಯಾಪಾಶವನ್ನು ಬಿಗಿಹಿಡಿದು ಅಹಂಕಾರಕ್ಕೆ ಅಂಕುಶವಾದರೆ ಅಭಯಹಸ್ತ ಭಕ್ತರ ಪೊರೆವ ಸಂಕೇತ. ಇನ್ನು ಈ ಮಹಾಗಣಪತಿಯ ವಾಹನವೋ ಇಲಿ. ಇಲ್ಲಿ ಇಲಿ ಮತ್ತು ಹಾವುಗಳ ಅನ್ಯೋನ್ಯತೆಯನ್ನು ಕಾಣಬಹುದು.

ಹಣ್ಣುಗಳು ಗಣಪತಿಗೆ ಪ್ರಿಯವಾದ ಆಹಾರ. ಕಬ್ಬು, ಹಸಿಕಡಲೆ, ಎಳ್ಳು, ಗರಿಕೆ, ಪಂಚಕಜ್ಜಾಯ, ಕಡುಬು, ಲಡ್ಡುಗಳು ಗಣಪತಿಗೆ ತುಂಬಾ ಇಷ್ಟ.

ವ್ಯಾಸರು ರಚಿಸಿದ ಮಹಾಭಾರತವನ್ನು ಬರೆದ ಗಣಪತಿಯ ಮದುವೆ ನಾಳೆ ಎಂಬುದು ಹಾಸ್ಯೋಕ್ತಿ. ಆದರೆ ತನ್ನನ್ನು ಒಲಿಸಿಕೊಂಡವರಿಗೆ ಸಿದ್ಧಿ ಬುದ್ಧಿ ಕ್ಷೇಮ ಮತ್ತು ಲಾಭಗಳನ್ನು ಕರುಣಿಸಬಲ್ಲ. ಆತ ಸಿದ್ಧಿ ವಿನಾಯಕ. ಅಂತೂ ಗಣೇಶ ಮಹಿಮೆ ಅಪಾರ, ಆದುದರಿಂದ ಗಣಪತಿ ಚೌತಿ ಬಂತೆಂದರೆ ಎಲ್ಲೆಲ್ಲೂ ಗೌಜಿ. ಮೊದಲ ದಿನ ಗೌರೀವ್ರತ. ಮರುದಿನ ಚೌತಿ.

ಚೌತಿ ದಿನ ಮಣ್ಣಿನ ಮಗ ಗಣಪತಿ ಆರಾಧನೆ ನಡೆಯುತ್ತದೆ. ಪಾರ್ವತಿ ಮಣ್ಣಿನಿಂದ ಸೃಷ್ಟಿಯಾದ ಗಣಪತಿಯ ಮಣ್ಣಿನ ವಿಗ್ರಹಕ್ಕೆ ಅಂದು ಪೂಜೆ.

ಕೆಲವು ದಿನಗಳ ಮೊದಲೇ ಮನೆಯಲ್ಲಿ ಆವೆಮಣ್ಣಿನಿಂದ ಗಣೇಶ ವಿಗ್ರಹ ರಚಿಸಲ್ಪಡುತ್ತದೆ. ಅಂಗಡಿಗಳಲ್ಲಿ ತಯಾರಿಸಿದ ಗಣೇಶ ವಿಗ್ರಹಗಳನ್ನು ತರಿಸುವುದೂ ಈಗ ಒಂದು ರೂಢಿಯಾಗಿದೆ. ಭಾದ್ರಪದ ಮಾಸದ ಶುಕ್ಲಪಕ್ಷ ಚತುರ್ಥಿ ದಿನ ಗಣಪತಿ ವಿಗ್ರಹವನ್ನು ಮನೆಗೆ ತರುವುದೇ ಒಂದು ದೊಡ್ಡ ಜಾತ್ರೆಯಾಗುತ್ತದೆ. ದೊಡ್ಡ ಮೆರವಣಿಗೆಯಲ್ಲಿ ಮಂಗಳ ವಾದ್ಯ ಗಂಟೆ ಸಮೇತ ಉತ್ಸಾಹದಿಂದ ಗಣೇಶನ ಮೂರ್ತಿಯನ್ನು ತೆಗೆದುಕೊಂಡು ಬಂದು ಮನೆ ಮನೆಗಳಲ್ಲಿ ಪ್ರತಿಷ್ಠಾಪಿಸುವುದೇ ಮುಂಜಾನೆಯ ಕಾರ್ಯಕ್ರಮವಾಗುತ್ತದೆ. ಮಧ್ಯಾಹ್ನದ ತನಕ ಗಣಪತಿ ಪೂಜೆಯೇ ದೊಡ್ಡ ಕೆಲಸವಾಗುತ್ತದೆ. ಹಗಲು ರಾತ್ರಿ ನಿದ್ದೆಗೆಟ್ಟು ತಯಾರಿಸಿದ ಉಂಡೆ, ಚಕ್ಕುಲಿ, ಕಡುಬು ಗಣೇಶನಿಗೆ ಸಮರ್ಪಣೆ ಒಂದು ವಿಶೇಷ ಆಕರ್ಷಣೆಯಾಗುತ್ತದೆ. ಸಂಜೆ ಎಷ್ಟು ಸಾಧ್ಯವೋ ಅಷ್ಟು ಪ್ರತಿಷ್ಠಾಪಿಸಿದ ಗಣೇಶ ವಿಗ್ರಹಗಳನ್ನು ನೋಡಿ ಆನಂದಿಸಿ ಜನರು ಪುಣ್ಯ ಜಮಾ ಮಾಡಿಕೊಳ್ಳುತ್ತಾರೆ.

ಈಗೀಗ ಗಣಪತಿ ಮೂರ್ತಿಯನ್ನು ಸಾರ್ವಜನಿಕ ಸ್ಥಳದಲ್ಲಿ ಪ್ರತಿಷ್ಠಾಪಿಸಿ ವೈಭವೋಪೇತವಾಗಿ ಗಣೇಶೋತ್ಸವ ಆಚರಿಸಲ್ಪಡುತ್ತದೆ. ಹತ್ತು ಸಮಸ್ತರಿಂದ ಹಣ ಸಂಗ್ರಹಿಸಿಯೋ ಅಥವಾ ಆಕರ್ಷಕ ಬಹುಮಾನ ಟಿಕೇಟುಗಳನ್ನು ಮಾರಿಯೋ ಹಣವನ್ನು ಒಟ್ಟು ಮಾಡಿ ಸಾರ್ವಜನಿಕ ಗಣೇಶೋತ್ಸವವನ್ನು ವಿಜೃಂಭಣೆಯಿಂದ ಆಚರಿಸುವುದನ್ನು ನೋಡುವುದೇ ತುಂಬಾ ಚೆಂದ. ಶಾಲೆ ಕಾಲೇಜುಗಳಲ್ಲಿ ಹಾಸ್ಟೆಲುಗಳಲ್ಲಿ ಗಣೇಶ ಹಬ್ಬವನ್ನು ಚುರುಕಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಿಸಲ್ಪಡುತ್ತದೆ. ಬೇಧ ಭಾವವನ್ನು ಮರೆತು ನಂಬಿಕೆಯಿಂದ ದೇಶದ ಎಲ್ಲಾ ಕಡೆಗಳಲ್ಲಿ ಎಲ್ಲರೂ ಶ್ರೀ ಗಣೇಶನನ್ನು ಪೂಜಿಸುವುದೇ ಒಂದು ವಿಶಿಷ್ಟ ಸಂದರ್ಭವಾಗಿದೆ. ಇದು ವಿವಿಧತೆಯಲ್ಲಿ ಏಕತೆಯನ್ನು ಮೂಡಿಸುತ್ತದೆ.

1982ರ ನಂತರ ಲೋಕಮಾನ್ಯ ಬಾಲಗಂಗಾಧರ ತಿಲಕರಿಂದಾಗಿ ಸಾರ್ವಜನಿಕ ಗಣೇಶ ಪೂಜೆ ಎಂಬ ಹಬ್ಬಕ್ಕೆ ರಾಷ್ಟ್ರೀಯ ಮಹತ್ವ ಒದಗಿ ಬಂತು. ಆದ್ದರಿಂದ ಇಂದು ದೇಶದ ಎಲ್ಲಾ ಭಾಗಗಳಲ್ಲಿ ಗಣೇಶೋತ್ಸವ ಸಮಗ್ರ ರಾಷ್ಟ್ರೀಯ ಸ್ವಾತಂತ್ರ್ಯ



ಆಂದೋಲನವನ್ನು ನೆನಪಿಗೆ ತರುತ್ತದೆ.

ಗಣೇಶ ವಿಸರ್ಜನೆ ಹಬ್ಬದ ಇನ್ನೊಂದು ಮುಖ್ಯ ಅಂಗ. ಪ್ರತಿಷ್ಠಾಪಿಸಿದ ಗಣೇಶ ವಿಗ್ರಹವನ್ನು ಮೆರವಣಿಗೆಯಲ್ಲಿ ಕೊಂಡುಹೋಗುತ್ತಾರೆ. ಆಗ ಕೆಲವರು ವೇಷ ಹಾಕಿ ಕುಣಿಯುವುದೂ ಉಂಟು. ಅಂತೂ ಈ ಮನೋರಂಜನೆ ಧಾರ್ಮಿಕ ಭಾವನೆಯನ್ನು ಉಳಿಸಿಕೊಳ್ಳಲು ಸಹಾಯಕ. ಕೊನೆಗೆ ಮೂರ್ತಿಯನ್ನು ಕೊಳದಲ್ಲಿ ಅಥವಾ ಸಮುದ್ರದಲ್ಲಿ ಹಾಕಿಬಿಡುತ್ತಾರೆ. ಆದರೆ ಗಣೇಶ ಮಾತ್ರ ನಿರಂತರ ಅಗ್ರಪೂಜೆಗೆ ಅರ್ಹನಾಗಿ ಇರುತ್ತಾನೆ.

'ಕಲೌ ದುರ್ಗಾ ವಿನಾಯಕೌ' ಎಂಬ ಆರ್ಯೋಕ್ತಿಯನ್ನು ಅನುಸರಿಸಿ ಕಲಿಯುಗದಲ್ಲಿ ಗಣಪತಿ-ದುರ್ಗೆಯರು ಭಕ್ತಿಗೆ ಶೀಘ್ರ ಅನುಗ್ರಹಕಾರಕ ದೇವತೆಗಳಾದ್ದರಿಂದ ಸರ್ವತ್ರ ಗಣಪತಿ ಮತ್ತು ದುರ್ಗೆಯರ ಆರಾಧನೆ ಪ್ರಸಿದ್ಧವಾಗಿದೆ.

ಪಂಚಾಂಗ ಮತ್ತು ಶಾಸ್ತ್ರದ ಪ್ರಕಾರ ಶುಭದಿನ ಹಾಗೂ ಅತ್ಯಂತ ಶುಭ ಮುಹೂರ್ತ ಮೂರುವರೆ ದಿನಗಳು ಯುಗಾದಿ, ವಿಜಯದಶಮಿ, ಬಲಿಪಾಡ್ಯಮಿ ಮತ್ತು ಅಕ್ಷಯತದಿಗೆ.

ಪುಣ್ಯಕರವಾದ ದೇವೀಕವಚದಲ್ಲಿ ಬ್ರಹ್ಮನು ಮಾರ್ಕಂಡೇಯನಿಗೆ ಪ್ರಸಿದ್ಧರಾದ ಒಂಭತ್ತು ದುರ್ಗೆಯರ ಬಗ್ಗೆ ಉಲ್ಲೇಖ ನೀಡುತ್ತಾನೆ.

***ಪ್ರಥಮಂ ಶೈಲಪುತ್ರೀ ಚ ದ್ವಿತೀಯಂ ಬ್ರಹ್ಮಚಾರಿಣೀ ।***
***ತೃತೀಯಂ ಚಂದ್ರಘಂಟೇತಿ ಕೂಷ್ಮಾಂಡೇತಿ ಚತುರ್ಥಕಮ್ ॥***
***ಪಂಚಮಂ ಸ್ಕಂದಮಾತೇತಿ ಷಷ್ಠಂ ಕಾತ್ಯಾಯನೀತಿ ಚ ॥***
***ಸಪ್ತಮಂ ಕಾಲರಾತ್ರಿಶ್ಚ ಮಹಾಗೌರೀತಿ ಚಾಷ್ಟಮಮ್ ॥***
***ನವಮಂ ಸಿದ್ಧಿದಾತ್ರೀ ಚ ನವದುರ್ಗಾಃ ಪ್ರಕೀರ್ತಿತಾಃ ॥***
***ಉಕ್ತಾನ್ಯೇತಾನಿ ನಾಮಾನಿ ಬ್ರಹ್ಮಣೈವ ಮಹಾತ್ಮನಾ॥***


**1) ಶೈಲಪುತ್ರಿ :** ನವರಾತ್ರಿಯ ಮೊದಲ ದಿನ ದುರ್ಗೆಯನ್ನು ಶೈಲಪುತ್ರಿ ಎಂದು ಪೂಜಿಸುತ್ತಾರೆ. ಪರ್ವತರಾಜನ ಮಗಳು ಶೈಲಪುತ್ರಿ. ತನ್ನ ಗಂಡ ಶಿವನಿಗೆ ಅವಮಾನವಾದುದರಿಂದ ತಂದೆ ದಕ್ಷ ಮಾಡಿದ ಯಜ್ಞದಲ್ಲಿ ಅವಳ ಪ್ರಾಣಾಹುತಿ ಆಗುತ್ತದೆ. ಮತ್ತೆ ಪರ್ವತರಾಜನ ಮಗಳಾಗಿ ಪಾರ್ವತಿಯಾಗಿ ಜನಿಸಿ ಶಿವನನ್ನೇ ಗಂಡನಾಗಿ ಪಡೆದಳು. ವೃಷಭದ ಮೇಲೆ ಕುಳಿತು ಒಂದು ಕೈಯಲ್ಲಿ ತ್ರಿಶೂಲ ಮತ್ತು ಇನ್ನೊಂದು ಕೈಯಲ್ಲಿ ಕಮಲದ ಹೂ ಧರಿಸಿ ಕುಳಿತಿರುವಳು. ವಾರಣಾಸಿಯ ಮಾರಹಘಾಟಿನಲ್ಲಿ ಶೈಲಪುತ್ರಿಯ ಪ್ರಮುಖ ದೇವಾಲಯವಿದೆ.

**2) ಬ್ರಹ್ಮಚಾರಿಣಿ :** ನವರಾತ್ರಿಯ ಎರಡನೇ ದಿನದಲ್ಲಿ ದುರ್ಗೆಯನ್ನು ಬ್ರಹ್ಮಚಾರಿಣಿ ಎಂದು ಪೂಜಿಸುತ್ತಾರೆ. ಬ್ರಹ್ಮಚಾರಿಣಿ ತನ್ನ ಎಡಕೈಯಲ್ಲಿ ಕಮಂಡಲುವನ್ನು ಮತ್ತು ಬಲಗೈಯಲ್ಲಿ ಜಪಮಾಲೆಯನ್ನು ಧರಿಸಿರುತ್ತಾಳೆ. ಕಾಮದಹನದ ನಂತರ ಪಾರ್ವತಿಯು ಶಿವನನ್ನು ಒಲಿಸಿಕೊಳ್ಳುತ್ತಾಳೆ. ಬ್ರಹ್ಮಚಾರಿಣಿ ಹಿಮವತನ ಪುತ್ರಿ - ಶೈಲಪುತ್ರಿ ಇವಳನ್ನು ಒಲಿಸುವ ಮಂತ್ರಗಳನ್ನು 'ದೇವಕಲ್ಪಮ್'ನಲ್ಲಿ ಕಾಣಬಹುದು. ತನ್ನ ಭಕ್ತರಿಗೆ ಶಾಂತಿ ಮತ್ತು ಅಭ್ಯುದಯವನ್ನು ಬ್ರಹ್ಮಚಾರಿಣಿ ದಯಪಾಲಿಸುತ್ತಾಳೆ.

**3) ಚಂದ್ರಘಂಟಾ :** ನವರಾತ್ರಿಯ ಮೂರನೇ ದಿನದಲ್ಲಿ ದುರ್ಗೆಯನ್ನು ಚಂದ್ರಘಂಟಾ ಎಂದು ಪೂಜಿಸುತ್ತಾರೆ. ಇವಳು ಹುಲಿಯ ಮೇಲೆ ಸವಾರಿ ಮಾಡುತ್ತಾಳೆ. ಹಣೆಯಲ್ಲಿ ಘಂಟೆಯಂತೆ ಚಂದ್ರನ ಆಕೃತಿ ಇರುವುದರಿಂದ ಇವಳು ಚಂದ್ರಘಂಟಾ. ಇವಳನ್ನು ಭಜಿಸಿದವರಿಗೆ ಧೈರ್ಯ ಮತ್ತು ಸ್ಥೈರ್ಯಗಳನ್ನು ಅನುಗ್ರಹಿಸುತ್ತಾಳೆ. ತ್ರಿಶೂಲ, ಗದೆ, ಬಿಲ್ಲು ಮತ್ತು ಬಾಣ, ಖಡ್ಗ, ಕಮಲದ ಹೂ, ಘಂಟೆ ಮತ್ತು ಕಮಂಡಲ ಇವಳು ಹತ್ತು ಹಸ್ತಗಳಲ್ಲಿ ಧರಿಸಿರುತ್ತಾಳೆ. ವಾರಣಾಸಿಯ 'ಮಾ ಚಂದ್ರಘಂಟಾ' ಪ್ರಮುಖ ದೇವಾಲಯ.

**4) ಕೂಷ್ಮಾಂಡಾ :** ನವರಾತ್ರಿಯ ನಾಲ್ಕನೇ ದಿನದಲ್ಲಿ ದುರ್ಗೆಯನ್ನು ಕೂಷ್ಮಾಂಡಾ ಎಂದು ಪೂಜಿಸುತ್ತಾರೆ. ಒಂದು ನಗುವಿನಿಂದ ಇಡೀ ಜಗತ್ತನ್ನು ಸೃಷ್ಟಿಸಿದಳು. ಆರೋಗ್ಯ, ಸಮೃದ್ಧಿ ಮತ್ತು ಶಕ್ತಿಗಳನ್ನು ತನ್ನನ್ನು ಪೂಜಿಸಿದ ಭಕ್ತರಿಗೆ ಆಶೀರ್ವದಿಸುತ್ತಾಳೆ. ಮಧುಕೈಟಬರ ಸಂಹಾರಕ್ಕೆ ವಿಷ್ಣುವನ್ನು ಪ್ರೇರೇಪಿಸುತ್ತಾಳೆ. ಎಂಟು ಸಿದ್ಧಿಗಳನ್ನು ಮತ್ತು ಒಂಭತ್ತು ನಿಧಿಗಳನ್ನು ತನ್ನನ್ನು ಪೂಜಿಸಿದವರಿಗೆ ಅನುಗ್ರಹಿಸುತ್ತಾಳೆ.

**5) ಸ್ಕಂದಮಾತೆ :** ನವರಾತ್ರಿಯ ಐದನೇ ದಿನದಲ್ಲಿ ದುರ್ಗೆಯನ್ನು ಸ್ಕಂದಮಾತೆ ಎಂದು ಪೂಜಿಸುತ್ತಾರೆ. ಸ್ಕಂದನಿಗೆ ಇನ್ನೊಂದು ಹೆಸರು ಕಾರ್ತಿಕೇಯ. ಷಣ್ಮುಖನೆಂದೂ ಕರೆಯುತ್ತಾರೆ. ತಾರಕಾಸುರನ ವಧೆ ಇವನಿಂದ ಆಗುತ್ತದೆ. ತನ್ನ ತೊಡೆಯಲ್ಲಿ ಷಣ್ಮುಖನನ್ನು ಕುಳ್ಳಿರಿಸಿ ಭಕ್ತರನ್ನು ಅನುಗ್ರಹಿಸುತ್ತಾಳೆ.



**6) ಕಾತ್ಯಾಯಿನಿ :** ನವರಾತ್ರಿಯ ಆರನೇ ದಿನದಲ್ಲಿ ದುರ್ಗೆಯನ್ನು ಕಾತ್ಯಾಯಿನಿ ಎಂದು ಪೂಜಿಸುತ್ತಾರೆ. ಆಯುಧಗಳನ್ನು ಹತ್ತು ಕೈಗಳಲ್ಲಿ ಧರಿಸಿ ತ್ರಿಶೂಲದಿಂದ ಮಹಿಷಾಸುರನ ಎದೆಯನ್ನು ಇರಿಯುತ್ತಾಳೆ. ಆದ್ದರಿಂದ ಇವಳು ಮಹಿಷಮರ್ದಿನಿ. ದೇವಿ ಭಾಗವತ ಪುರಾಣ, ದೇವಿಮಹಾತ್ಮೆ ಮತ್ತು ಸ್ಕಂದ ಪುರಾಣದಲ್ಲಿ ಕಾತ್ಯಾಯಿನಿಯ ಬಗ್ಗೆ ಉಲ್ಲೇಖವಿದೆ. ಕಾತ್ಯಾಯಿನಿಯನ್ನು ಭಕ್ತಿಯಿಂದ ಪೂಜಿಸಿದವರಿಗೆ ಅರ್ಥ, ಕಾಮ ಮತ್ತು ಮೋಕ್ಷವನ್ನು ಕರುಣಿಸುತ್ತಾಳೆ.

**7) ಕಾಳರಾತ್ರಿ :** ನವರಾತ್ರಿಯ ಏಳನೇ ದಿನದಲ್ಲಿ ದುರ್ಗೆಯನ್ನು ಕಾಳರಾತ್ರಿ ಎಂದು ಪೂಜಿಸುತ್ತಾರೆ. ದೇವಿ ಕಾಳರಾತ್ರಿ ಭಕ್ತರಿಂದ ವಿಶೇಷ ಪೂಜೆಯನ್ನು ಸ್ವೀಕರಿಸುತ್ತಾಳೆ. ಇವಳ ಭಯಂಕರ ಸ್ವರೂಪವನ್ನು ಕಾಣಬಹುದು. ಇವಳ ದೊಡ್ಡ ಕೆಂಪು ಕಣ್ಣುಗಳು, ಹೊರಚಾಚಿದ ಕೆಂಪು ನಾಲಗೆ ಮತ್ತು ಖಡ್ಗ ಇವಳ ಭಯಂಕರತೆಯನ್ನು ತೋರಿಸುತ್ತದೆ. ರಕ್ತಬೀಜಾಸುರನ ಸಂಹಾರಕ್ಕೆ ಈ ಭಯಂಕರ ಸ್ವರೂಪವನ್ನು ಪಡೆದು ಅವನ ರಕ್ತವು ಭೂಮಿಗೆ ತಾಗದಂತೆ ಅವನ ವಧೆಗೆ ಕಾರಣಳಾಗುತ್ತಾಳೆ.

**8) ಮಹಾಗೌರಿ :** ನವರಾತ್ರಿಯ ಎಂಟನೇ ದಿನದಲ್ಲಿ ದುರ್ಗೆಯನ್ನು ಮಹಾಗೌರಿ ಎಂದು ಪೂಜಿಸುತ್ತಾರೆ. ಮೂರುಕಣ್ಣುಗಳು, ನಾಲ್ಕು ಕೈಗಳು, ಮಲ್ಲಿಗೆಯಂಥ ಕಂಪು, ಚಂದ್ರನಂತೆ ಹೊಳಪು, ಶಾಂತಿ ಮತ್ತು ಕರುಣೆ ಇವಳ ವಿಶೇಷತೆಗಳು. ಶುಂಭನಿಶುಂಭರ ವಧೆಗೆ ಮಹಾಗೌರಿ ಅವತಾರವೇ ಕಾರಣ.

**9) ಸಿದ್ಧಿದಾತ್ರಿ :** ನವರಾತ್ರಿಯ ಕೊನೆಯ ದಿನದಲ್ಲಿ ದುರ್ಗೆಯನ್ನು ಸಿದ್ಧಿದಾತ್ರಿ ಎಂದು ಪೂಜಿಸುತಾರೆ. ಇವಳು ಸಿಂಹದ ಮೇಲೆ ಸವಾರಿ ಮಾಡುತ್ತಾಳೆ. ಇವಳು ಎಂಟು ಸಿದ್ಧಿಗಳನ್ನು ತನ್ನ ಭಕ್ತರಿಗೆ ದಯಪಾಲಿಸುತ್ತಾಳೆ. ತನ್ನ ಭಕ್ತರ ಎಲ್ಲಾ ಅಭೀಷ್ಟವನ್ನು ನೆರವೇರಿಸುತ್ತಾಳೆ. ಶಂಖ, ಚಕ್ರ, ಖಡ್ಗ ಮತ್ತು ತ್ರಿಶೂಲವನ್ನು ಇವಳು ಧರಿಸಿರುತ್ತಾಳೆ.

ಈ ಒಂಬತ್ತು ಅವತಾರಗಳನ್ನು ನವದುರ್ಗೆಯರು ಎಂದು ಕರೆಯುತ್ತಾರೆ. ನಾವೆಲ್ಲ ಮುಖ್ಯವಾಗಿ ಆಚರಿಸುವ ನವರಾತ್ರಿ ಮಹಾನವರಾತ್ರಿ. ಇದೇ ಶರನ್ನವರಾತ್ರಿ. ಶರದ್‌ಋತುವಿನಲ್ಲಿ ಬರುವುದರಿಂದ ಇದನ್ನು ಶರನ್ನವರಾತ್ರಿ ಎಂದು ಕರೆಯುತ್ತಾರೆ. ಈ ಒಂಬತ್ತು ದಿನಗಳಲ್ಲಿ ಮೊದಲ ಮೂರು ದಿನಗಳು ಶಕ್ತಿಯನ್ನು ದುರ್ಗೆಯಾಗಿ ಪೂಜಿಸುತ್ತೇವೆ. ಅನಂತರದ ಮೂರು ದಿನಗಳು ಲಕ್ಷ್ಮಿಯಾಗಿ ಪೂಜಿಸುತ್ತೇವೆ. ಕೊನೆಯ ಮೂರು ದಿನಗಳು ಜ್ಞಾನಾಕ್ಷಿ ಸರಸ್ವತಿಯ ರೂಪದಲ್ಲಿ ಶಾರದಾ ಪರಮೇಶ್ವರಿಯಾಗಿ ಪೂಜಿಸುತ್ತೇವೆ. ಈ ಒಂಬತ್ತು ದಿನಗಳಲ್ಲಿ ಅನೇಕ ಜನರು ಕೊನೆಯ ಮೂರು ದಿನಗಳನ್ನು ಆಚರಿಸುತ್ತಾರೆ – ದುರ್ಗಾಷ್ಟಮಿ, ಮಹಾನವಮಿ ಮತ್ತು ವಿಜಯದಶಮಿ. ದೇವಿಯು ದುರ್ಗಾಷ್ಟಮಿಯ ದಿನ ಅಷ್ಟಸಿದ್ಧಿಗಳನ್ನು ಪಡೆದು ಸರ್ವ ಆಯುಧಗಳನ್ನು ಹಿಡಿದು ತನ್ನ ಆಗಾಧವಾದ ಶಕ್ತಿರೂಪದಲ್ಲಿ ಇರುತ್ತಾಳೆ. ಮಹಾನವಮಿಯ ದಿನ ದುರ್ಗೆಯನ್ನು ಮಹಿಷಾಸುರ ಮರ್ದಿನಿ ಎಂದು ಸಹ ಕರೆಯುತ್ತಾರೆ. ಆ ದಿನ ಸಿದ್ಧಿದಾತ್ರಿಯ ಸ್ವರೂಪದಲ್ಲಿ ದೇವಿಯು ರಾಕ್ಷಸನ ಸಂಹಾರ ಮಾಡಿ ತನ್ನ ಕೊನೆಯ ಸ್ವರೂಪವನ್ನು ತೋರಿದ ದಿನ. ರಾಕ್ಷಸನನ್ನು ಸಂಹರಿಸಿ ತನ್ನ ಭಕ್ತರನ್ನು ಕಾಪಾಡಿದ ದುರ್ಗೆಯ ವಿಜಯ ಸಾಧನೆಗೆ ಹತ್ತನೇ ದಿನ ವಿಜಯದಶಮಿಯನ್ನು ಬಹಳ ಸಂಭ್ರಮದಿಂದ ಆಚರಿಸುತ್ತೇವೆ. ಆದ್ದರಿಂದ ನವರಾತ್ರಿಗಳು ಎಂದರೆ ಒಂಬತ್ತು ರಾತ್ರಿಗಳು. ದುರ್ಗೆಯನ್ನು ಪೂಜಿಸಿ ಹತ್ತನೇ ದಿನ ವಿಜಯಸಾಧನೆಗಾಗಿ ವಿಜಯದಶಮಿಯನ್ನು ಆಚರಿಸುತ್ತೇವೆ.

ಶ್ರದ್ಧೆಯಿಂದ, ಶುಚಿಯಿಂದ ದುರ್ಗೆಯ ಬೀಜಾಕ್ಷರಿ ಮಂತ್ರಗಳನ್ನು ಜಪಿಸಬೇಕು. 'ದಂ ದುರ್ಗಾಯ್ಯೆ ನಮಃ' ಅಥವಾ ದೇವಿ ಬೀಜಾಕ್ಷರಿ ಮಂತ್ರವಾದ 'ಓಂ ಐಂ ಹ್ರಿಂ ಕ್ಲೀಂ ಸೌಃ' – ಈ ಮಂತ್ರಗಳನ್ನು ಪ್ರತಿದಿನ ಪಠಿಸುತ್ತಿರಬೇಕು. ಲಲಿತಾ ಸಹಸ್ರನಾಮ ಪಾರಾಯಣ ಮಾಡಬಹುದು. ದೇವಿ ಮಹಾತ್ಮೆ (ದುರ್ಗಾ ಸಪ್ತಶತಿ) ಯನ್ನು ಓದಬಹುದು. ಒಂಬತ್ತು ದಿನಗಳ ಸತತವಾಗಿ ಹೋಮ-ಅಗ್ನಿ ಕಾರ್ಯ ಮಾಡಬಹುದು. ಮನೆಯಲ್ಲಿ ಗೊಂಬೆಗಳನ್ನು ಕೂರಿಸಿ ಜನರನ್ನು ಮನೆಗೆ ಕರೆದು ಭಜನೆ ಮಾಡಬಹುದು. ಈ ಶಕ್ತಿಶಾಲಿ ಒಂಬತ್ತು ದಿನಗಳು ಮಾತ್ರ ನಮಗೆ ಸಿಗಬೇಕು ಎಂದರೆ ಒಂದು ವರ್ಷ ಕಾಯಬೇಕು.

ಗೊತ್ತಿಲ್ಲದಂತಹ ಒಂದು ದೊಡ್ಡ ಶಕ್ತಿ ನಮ್ಮನ್ನು ಸೇರುತ್ತದೆ. ನಮ್ಮ ವ್ಯಕ್ತಿತ್ವಕ್ಕೆ ಒಂದು ಹೊಸ ಕಳೆ ಬರುತ್ತದೆ. ಧೈರ್ಯ, ಸ್ಥೈರ್ಯ ಮತ್ತು ಶಕ್ತಿ ಹೆಚ್ಚಾಗುತ್ತದೆ. ಎಲ್ಲಾ ಕೆಲಸಗಳಲ್ಲಿ ವಿಜಯಸಾಧಿಸಲು ಅದು ನೆರವಾಗುತ್ತದೆ. ನವರಾತ್ರಿಯ ಶಕ್ತಿಶಾಲಿ ಒಂಬತ್ತು ರಾತ್ರಿಗಳಿಗಿರುವ ಶಕ್ತಿಯೇ ಅದು. ಯಾವುದೇ ಪರಿಸ್ಥಿಯಲ್ಲಿಯೂ ನವರಾತ್ರಿಯಲ್ಲಿ ಭಕ್ತಿಯಿಂದ ಶ್ರದ್ಧೆಯಿಂದ ದೇವಿಯನ್ನು ಮನಸ್ಸಿನಲ್ಲೇ ಪೂಜಿಸಿದರೂ ದೇವಿ ನಮ್ಮ ಕೈ ಹಿಡಿದು ಕಾಪಾಡುತ್ತಾಳೆ. ಯಾರು ದೇವಿಯನ್ನು ನಂಬಿ ಪೂಜೆ ಮಾಡುತ್ತಾರೋ ಅವರಿಗೆ ದೇವಿಯ ಅನುಗ್ರಹ ಖಂಡಿತ ಲಭಿಸುತ್ತದೆ.

*ಯಾ ದೇವೀ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ ।*
*ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥*

# ನಮ್ಮ ಹಿರಿಯರಿಗೆ ಗಾಂಧೀಜಿ ಮೇಲಿದ್ದ ಅಭಿಮಾನ

*–ಕೆ. ದಿನಮಣಿ ಶಾಸ್ತ್ರೀ, ಬ್ರಹ್ಮಾವರ.*

ಹೇಳಿ ಕೇಳಿ ಇದು ಮೊಬೈಲ್ ಯುಗ. ಹಾಗಾಗಿ ಇಂದಿನ ಬಹಳಷ್ಟು ಶಾಲಾ ವಿದ್ಯಾರ್ಥಿಗಳಿಗೆ ಇನ್ಲಾಂಡ್ ಲೆಟರ್ ಮತ್ತು ಅಂಚೆಕಾರ್ಡ್ ಎಂದರೆ ಏನೆಂದೇ ಗೊತ್ತಿಲ್ಲದ ಸ್ಥಿತಿಗೆ ತಲುಪಿದ್ದಾರೆ. ಪರಿಣಾಮವಾಗಿ ಪತ್ರ ಬರೆಯಲು ಗೊತ್ತೇ ಇಲ್ಲದಂತಾಗಿದೆ. ಆದರೂ ಭಾಷಾ ಪಾಠಗಳ ಪರೀಕ್ಷೆಗಳಲ್ಲಿ ತಂದೆ ತಾಯಿಗೆ, ಗುರು ಹಿರಿಯರಿಗೆ, ಗೆಳೆಯರಿಗೆ, ಇಲಾಖಾಧಿಕಾರಿಗಳಿಗೆ ಪತ್ರ ಬರೆಯಿರಿ ಎನ್ನುವ ಪ್ರಶ್ನೆಗೆ ಉತ್ತರಿಸಲಷ್ಟೇ ಅವರ ಮನಸ್ಸು ಸೀಮಿತವಾಗಿದೆ. ಅದರಾಚೆಗಿನ ಭಾವನೆಗಳೇ ಇಲ್ಲ.

ಇಲ್ಲೊಂದು 14.2.1948ರ ಪತ್ರವಿದೆ. ಇದು ದ.ಕ. ಜಿಲ್ಲೆಯ ಪುತ್ತೂರಿನ ಬಪ್ಪಳಿಗೆಯ ಕೆ.ರಾಮಕೃಷ್ಣ ಶಾಸ್ತ್ರಿಗಳ ಪತ್ನಿ ಶ್ರೀಮತಿ ಪರಮೇಶ್ವರೀ ದೇವಿಯವರು ದೂರದ ಮದರಾಸಿನಲ್ಲಿ ಕಲಿಯುತ್ತಿದ್ದ ಮಗ ಚಿ।ಗೋಪಾಲಕೃಷ್ಣನಿಗೆ ಬರೆದ ಪತ್ರವಾಗಿದೆ. ವಿಶೇಷವೆಂದರೆ ಆರಂಭದ ಉಭಯ ಕುಶಲೋಪರಿಯಾದೊಡನೆ ನೇರವಾಗಿ ಗಾಂಧೀಜಿಯವರ ಹತ್ಯೆಯ ನಂತರದಲ್ಲಿ ಪುತ್ತೂರಿನಲ್ಲಿ ನಡೆದ ಘಟನೆಗಳ ವಿಚಾರವನ್ನು ಬಹಳ ಬೇಸರದಿಂದ ಮಗನಲ್ಲಿ ತೋಡಿಕೊಂಡಿದ್ದಾರೆ.

**ಪತ್ರದ ವಿಷಯ:** "ಗಾಂಧೀಜಿಯವರು ಮೃತಪಟ್ಟಿದ್ದರಿಂದ ಇಡೀಲೋಕವೇ ದು:ಖಸಾಗರದಲ್ಲಿ ಮುಳುಗಿದೆ. ಬರೇ ಪುತ್ತೂರಿನಲ್ಲೇ ಕಂಡ ಹಲವಾರು ದೃಷ್ಯಗಳಿಂದ ಆ ಮಹಾತ್ಮನ ಮಹಾತ್ಮೆಯು ಎಷ್ಟು ಇದೆ, ಜನರಿಗೆ ಅವರಲ್ಲಿ ಎಷ್ಟು ಶ್ರದ್ಧೆ ಇದೆ, ಎಂದು ತಿಳಿದು ನನಗೆ ಈಗ ಬಹಳ ಆಶ್ಚರ್ಯವೂ, ಅಂತಹ ಮಹಾತ್ಮನ ಮರಣದಿಂದ ದು:ಖವೂ ಉಕ್ಕಿ ಹರಿಯುತ್ತಿದೆ. ಜನರಾಡುವ ಮಾತುಗಳನ್ನು ಕೇಳಿದಾಗ ಅವನೊಬ್ಬ ದೇವರ ಅವತಾರವೆಂದೇ ನಂಬಿದ್ದೇನೆ. ಇಂತಹ ಮಹಾತ್ಮನ ಕೊಲೆಮಾಡುವ ಧೈರ್ಯವು ಆ ಕೊಲೆಪಾತಕಿಗೆ ಹೇಗೆ ಬಂತೋ ದೇವರೇ ಬಲ್ಲ!. ಆ ದುರಾತ್ಮನಿಗೆ ದೇವರು ಯಾವ ಶಿಕ್ಷೆಯನ್ನು ನಿಶ್ಚಯಿಸಿರುವರೋ!. ಇಲ್ಲಿ ಮಹಾಲಿಂಗೇಶ್ವರ ದೇವರ ವಠಾರದಲ್ಲಿ ಎಲ್ಲರಿಗೂ ಮತಭೇದವಿಲ್ಲದೇ ಈ ದಿನ ಭೋಜನವನ್ನು ಕೊಟ್ಟಿರುವರು. ನಿನ್ನೆ ಸಂಜೆ ಇಡೀ ಪೇಟೆಯಲ್ಲಿ ಮೌನವಾಗಿ ಮೆರವಣಿಗೆಯಾದ ಮೇಲೆ ಕೋರ್ಟುಗಡ್ಡೆಯಲ್ಲಿ ಸಭೆಸೇರಿ, ಒಬ್ಬ ಪಾದ್ರಿ ಮಳೆಯಾಲದಲ್ಲಿಯೂ, ಕೊಂಕಣಿಯಲ್ಲಿ ಇಗರ್ಜಿಯ ಗುರುವೂ, ಕನ್ನಡದಲ್ಲಿ ಶಿವರಾಮ ಕಾರಂತರೂ ಗಾಧೀಜಿಯವರ ಅಹಿಂಸೆ, ಸತ್ಯಗಳ ವಿಷಯದಲ್ಲಿಯೂ, ಮತ್ತು ಮುಂದಿನ ಜನಾಂಗದವರು ಯಾವ ರೀತಿ ವರ್ತಿಸತಕ್ಕದ್ದೆಂದೂ, ಭಾಷಣಗಳನ್ನಿತ್ತರು. ಈ ಸಭೆಗೆ ನಾವೂ ಹೋಗಿದ್ದೆವು.

ಇಲ್ಲಿ ಆರ್.ಎಸ್.ಎಸ್.ನ ಹಲವಾರು ಮುಖಂಡರನ್ನೂ, ದೊಡ್ಡ ದೊಡ್ಡ ಹುಡುಗರನ್ನೂ ಕೈದು ಮಾಡಿರುವರು. ಇಂದೀಲು ಉಪಾಧ್ಯಾಯರಾದ ಕೃಷ್ಣಮಾಚಾರ್ರ್ಯರನ್ನೂ ಹಿಡಿದಿರುವರು. ಇದನ್ನೆಲ್ಲಾ ಗ್ರಹಿಸುವಾಗ ನನಗೆ ಭಯವಾಗುತ್ತಿದೆ." ಪತ್ರದ ಕೊನೆಯಲ್ಲಿ, ಅಲ್ಲಿಯ ನಮ್ಮ ಮಹಾತ್ಮಾಜೀಯ ವಿಷಯದ ವಿಶೇಷ ವರ್ತಮಾನಗಳನ್ನು ತಿಳಿಸು ಎಂದೂ ಬರೆದಿರುತ್ತಾರೆ. ಎಪ್ಪತ್ತಮೂರು ವರುಷಗಳ ಹಿಂದಿನ ಈ ಪತ್ರವನ್ನು ಓದಿದಾಗ ಅಂದಿನ ನಮ್ಮ ಹಿರಿಯರಿಗೆ ಗಾಂಧೀಜಿಯ ಬಗ್ಗೆ ಎಷ್ಟು ಅಭಿಮಾನ ಮತ್ತು ಭಕ್ತಿ ಇತ್ತು ಎನ್ನುವ ಅರಿವಾಗುತ್ತದೆ.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.**

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ 2021-2022

**ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್, ಬಿ.ಎಡ್, ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.3,00,000ಕ್ಕೆ ಮೀರದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹಿಂದಿನ ತರಗತಿಯ ಅಂಕಪಟ್ಟಿಯ ಪ್ರತಿ, ಪ್ರಸ್ತುತ ವರ್ಷದ ಶಾಲೆಯಿಂದ ವ್ಯಾಸಂಗ ಪ್ರಮಾಣ ಪತ್ರ, ಮತ್ತು ಬ್ಯಾಂಕಿನ ಖಾತೆಯ ವಿವರ ಸಹಿತ ಶ್ರೀ ಶಾರದಾ ಮಂಟಪದಲ್ಲಿ ಲಭ್ಯವಿರುವ ನಿಗದಿತ ಅರ್ಜಿ ಫಾರಂನಲ್ಲಿ ತಾ.15-11-2021ರ ಒಳಗೆ ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ-576102 ಅರ್ಜಿಯನ್ನು ಕಳುಹಿಸಿ ಕೊಡಬೇಕು.**

**- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಡಾ। ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ 2021-2022

ಡಾ। ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. **2021-2022**ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ** ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು **ಕೈಬರಹದಲ್ಲಿ ಅರ್ಜಿ ಬರೆದು ಪೋಷಕರ ಸಹಿಯೊಂದಿಗೆ,** ಪರೀಕ್ಷೆಯ ಅಂಕಪಟ್ಟಿ ಹಾಗೂ ವ್ಯಾಸಂಗ ಪ್ರಮಾಣ ಪತ್ರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ **ತಾ.15-11-2021**ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳೂ ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ಫೋನ್ : 0820-2522408)ಯಲ್ಲಿ ವಿಚಾರಿಸಬಹುದು.**

**-ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ 2021-2022

**ಉಡುಪಿ ಮತ್ತು ದ.ಕ. ಜಿಲ್ಲೆಗಳ** ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ ಎಲ್ಲಾ ವಿಷಯಗಳಲ್ಲಿ ರ್‍ಯಾಂಕ್ ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ **ತಾ.15-11-2021**ರೊಳಗೆ **ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ** ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಉದಯಚಂದ್ರ ಪ್ರತಿಭಾ ಪುರಸ್ಕಾರ 2021-2022

ಸಂಘದ ಯುವವೇದಿಕೆಯ ಆಶ್ರಯದಲ್ಲಿ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ** ನಮ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ನೀಡಲಾಗುವುದು. **2020-21**ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪದವಿಪೂರ್ವ ಮೂರು ವಿಭಾಗಗಳಲ್ಲಿ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ಅಂಕಪಟ್ಟಿಯ ಪ್ರತಿ, ವಿಳಾಸ, ಫೋನ್ ನಂಬ್ರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ ಅರ್ಜಿಯನ್ನು **ಅಧ್ಯಕ್ಷರು, ಯುವವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು ಉಡುಪಿ - 576 102** ಇಲ್ಲಿಗೆ **ತಾ.15-11-2021**ರೊಳಗೆ ಕಳುಹಿಸಿ ಕೊಡಬೇಕು.

**- ಅಧ್ಯಕ್ಷರು, ಯುವ ಮತ್ತು ಕ್ರೀಡಾ ವೇದಿಕೆ.**

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.







RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

# ಹರಿದಾಸ ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯರವರ ವ್ಯಕ್ತಿ ಪರಿಚಯ



–ಡಾ.ಬಿ ಜನಾರ್ದನ ಭಟ್

ಈ ದೇವಸ್ಥಾನವನ್ನು ನಿರ್ಮಿಸಿದಾಗ (ಅದನ್ನು ನಿರ್ಮಿಸಿದವರು ಹರಿದಾಸರು ತಮ್ಮ ಮಗಳನ್ನು ಮದುವೆ ಮಾಡಿಕೊಟ್ಟ ಕುಟುಂಬದವರು), ಅವರ ಸಮಾಜ ಬಾಂಧವರು ಒತ್ತಾಯಿಸಿದ ಕಾರಣ ಹರಿದಾಸರು ಇಲ್ಲಿಗೆ ಬಂದು ನೆಲೆಸಿದರು. ಕೊನೆಗೆ ತಮ್ಮ ಆಸ್ತಿಯನ್ನೆಲ್ಲ ದೇವಸ್ಥಾನಕ್ಕೆ ಬರೆದುಕೊಟ್ಟರು. ಅವರ ಕುಟುಂಬಸ್ಥರು ಸ್ಥಾಪಿಸಿರುವ ಸತ್ಸಂಗ ಸೇವಾ ಸಮಿತಿಯು ಈಗಲೂ ಈ ದೇವಸ್ಥಾನವನ್ನು ಕೇಂದ್ರವಾಗಿಟ್ಟುಕೊಂಡು ಅವರ ಸ್ಮರಣೆಯ ಮತ್ತು ಸಾಂಸ್ಕೃತಿಕ ಮಹತ್ವದ ಕೆಲಸಗಳನ್ನು ಮಾಡುತ್ತಿದೆ.

**ಪಾವಂಜೆ ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯನವರ ಬದುಕಿನ ಕಥೆ ಹೀಗೆ:** ಎಂಟು ವರ್ಷ ತುಂಬಿದ ಬಾಲಕ ಲಕ್ಷ್ಮೀನಾರಾಯಣನನ್ನು ದೊಡ್ಡಪ್ಪ ಸೀತಾರಾಮಯ್ಯನಿಗೆ ದತ್ತಕ್ಕೆ ಕೊಡಲಾಗಿತ್ತು. ಅವರೇ ಅವನಿಗೆ ಬ್ರಹ್ಮೋಪದೇಶವನ್ನು ನೀಡಿದರು. ಅವನಿಗೆ ಹತ್ತು ವಯಸ್ಸು ತುಂಬಿದಾಗ ಹೆತ್ತ ತಂದೆ ವೆಂಕಟಕೃಷ್ಣಯ್ಯನವರು ತೀರಿಕೊಂಡಮೇಲೆ ಬಾಲಕನಿಗೆ ಮಾನಸಿಕ ಆಘಾತವಾಗಿ, ಏನನ್ನೂ ಮಾಡದೆ ಜಡಭರತನಂತಾಗಿ ಬಿಟ್ಟ. ದೊಡ್ಡಪ್ಪ ದೊಡ್ಡಮ್ಮ ಅವನನ್ನು ನಿರ್ಲಕ್ಷಿಸಿದರು. ಬಾಲಕ ಒಂದು ದಿನ ಯಾರಿಗೂ ತಿಳಿಸದೇ ಯಾತ್ರಾರ್ಥಿಗಳ ಜೊತೆ ಮನೆ ಬಿಟ್ಟು ಹೋಗಿಬಿಟ್ಟ. ಮನೆಯವರು ಅವನ ಹುಡುಕಾಟಕ್ಕೆ ಮನ ಮಾಡಲಿಲ್ಲ. ಬೈರಾಗಿಗಳೊಂದಿಗೆ ಅಲೆಯುತ್ತ ಕಾಶಿಗೆ ಹೋದ ಲಕ್ಷ್ಮೀನಾರಾಯಣನಿಗೆ ಅಲ್ಲಿ ಕಾಶಿ ಮಠದ ಆಶ್ರಯ ಸಿಕ್ಕಿದ್ದು, ಅಲ್ಲಿ ಅವನ ಆಧ್ಯಾತ್ಮಿಕ ಪುನರ್ಜನ್ಮ ಇತ್ಯಾದಿ ಯಾವ ಸುದ್ದಿಯೂ ಊರಿಗೆ ತಲುಪಲಿಲ್ಲ.

**ಹರಿದಾಸರ ಗುರುಗಳು – ಭುವನೇಂದ್ರ ತೀರ್ಥ ಸ್ವಾಮಿಗಳು:** ಹರಿದಾಸ ಪಾವಂಜೆ ಲಕ್ಷ್ಮೀನಾರಾಯಣಯ್ಯನವರು ಶ್ರೀ ಕಾಶೀ ಮಠದ ಶ್ರೀ ಭುವನೇಂದ್ರ ತೀರ್ಥರ ಶಿಷ್ಯರು. ಶ್ರೀ ಭುವನೇಂದ್ರ ತೀರ್ಥರು ಮಾಧ್ವ ಅಂದರೆ ದ್ವೈತ ಸಂಪ್ರದಾಯದ ಒಬ್ಬರು ಪೀಠಾಧಿಪತಿಗಳು. ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಶ್ರೀ ಕಾಶೀ ಮಠ ಭವ್ಯ ಪರಂಪರೆ ಉಳ್ಳ ಗುರುಪೀಠ.

ಆ ಗುರುಪೀಠದ ಪರಂಪರೆಯಲ್ಲಿ ಇತಿಹಾಸಪ್ರಸಿದ್ಧರೂ, ಬಹುಮುಖ ಪ್ರತಿಭೆಯ ವಿದ್ವಾಂಸರೂ ಆಗಿದ್ದ ಗುರುಗಳು ಶ್ರೀಮದ್ ಭುವನೇಂದ್ರ ತೀರ್ಥ ಸ್ವಾಮೀಜಿಯವರು (1837–1886). 1864ರಿಂದ 1882 ರವರೆಗೆ ಸುಮಾರು ಹದಿನೆಂಟು ವರ್ಷಗಳ ಕಾಲ ಪಾವಂಜೆ ಲಕ್ಷ್ಮೀನಾರಾಯಣಯ್ಯನವರಿಗೆ ಆಶ್ರಯ ಕೊಟ್ಟು ವಿದ್ಯಾದಾನ ಮಾಡಿ, ಹರಿದಾಸ ದೀಕ್ಷೆ ನೀಡಿದವರು ಸ್ವಾಮೀಜಿಯವರು. ಹರಿದಾಸರು ತಮ್ಮ ಕೆಲವು ಕೀರ್ತನೆಗಳಲ್ಲಿ ಗುರುಗಳಾದ ಶ್ರೀ ಭುವನೇಂದ್ರ ತೀರ್ಥರನ್ನು ಸ್ತುತಿಸಿದ್ದಾರೆ. ತಮ್ಮ ಗುರುಗಳ ದ್ವೈತ ಸಿದ್ಧಾಂತವನ್ನು, ಹರಿಸರ್ವೋತ್ತಮತ್ವವನ್ನು ಹರಿದಾಸರು ತಮ್ಮ ಕೀರ್ತನೆಗಳಲ್ಲಿ ಪ್ರತಿಪಾದಿಸಿದ್ದಾರೆ. ಅವರು ಹುಟ್ಟಿದ ಸ್ಥಾನಿಕ ಬ್ರಾಹ್ಮಣ ಅಥವಾ ಶಿವ ಬ್ರಾಹ್ಮಣ ಸಮುದಾಯ ಅದ್ವೈತ ಸಂಪ್ರದಾಯವನ್ನು ಪಾಲಿಸುತ್ತದೆ.

ಸ್ವಾಮೀಜಿಯವರು ಶಿಲ್ಪಕಲಾ ವಿದ್ಯೆಯಲ್ಲಿ ಪಾರಂಗತರಾಗಿದ್ದರು ಮತ್ತು ಕಾರ್ಕಳದ ರೆಂಜಾಳ ಶೆಣೈ ಕುಟುಂಬದವರಿಗೆ ಶಿಲ್ಪಕಲಾ ವಿದ್ಯೆಯನ್ನು ತಿಳಿಸಿಕೊಟ್ಟರು. ಈ ಕುಟುಂಬದ ವಿಶ್ವವಿಖ್ಯಾತ ಶಿಲ್ಪಿ ರೆಂಜಾಳ ಗೋಪಾಲಕೃಷ್ಣ ಶೆಣೈಯವರು ಧರ್ಮಸ್ಥಳದ ಗೊಮ್ಮಟ ವಿಗ್ರಹವನ್ನು ಮತ್ತಿತರ ವಿಗ್ರಹಗಳನ್ನು ಕೆತ್ತಿದ್ದನ್ನು ನೆನಪಿಸಿಕೊಳ್ಳಬಹುದು. ಕುಲಕಸುಬು ಅಲ್ಲದ ವಿದ್ಯೆಗಳನ್ನು ಕಲಿಯಲು ಪ್ರೇರಣೆ ನೀಡಿದ, ಮತ್ತು ಅಂತಹ ವಿದ್ಯೆಗಳನ್ನು ತಾವೇ ಕಲಿಸಿದ ಶ್ರೀ ಭುವನೇಂದ್ರ ತೀರ್ಥರು ಎಷ್ಟು ದೊಡ್ಡ ಜ್ಞಾನಿ ಮತ್ತು ಸಮಾಜ ಸುಧಾರಕ ಎನ್ನುವುದು ಅರ್ಥವಾಗುತ್ತದೆ. ರೆಂಜಾಳ ಕುಟುಂಬದವರ ಕಾರ್ಕಳದ ಶ್ರೀ ಭುವನೇಂದ್ರ ಶಿಲ್ಪ ಶಾಲೆ ಇಂದಿಗೂ ಪ್ರಸಿದ್ಧವಾಗಿದೆ. ಸ್ವಾಮೀಜಿಯವರು ಆಯುರ್ವೇದ ಶಾಸ್ತ್ರದಲ್ಲಿಯೂ ಪಾರಂಗತರಾಗಿದ್ದು ಕಟಪಾಡಿಯ ನಾಯಕ್ ಕುಟುಂಬದವರಿಗೆ ಆಯುರ್ವೇದ ವಿದ್ಯೆಯನ್ನು ಅನುಸರಿಸಲು ಪ್ರೋತ್ಸಾಹಿಸಿದರು. ಈಗ ಆ ಕುಟುಂಬದ ಕಟಪಾಡಿಯ ಶ್ರೀ ಭುವನೇಂದ್ರ ಆಯುರ್ವೇದಿಕ್ ಪ್ರಾಡಕ್ಟ್ಸ್ ಪ್ರಸಿದ್ಧವಾಗಿದೆ. ಸ್ವಾಮೀಜಿಯವರು ಆಧುನಿಕ ಶಿಕ್ಷಣ ನೀಡುವ ಶಾಲೆಗಳನ್ನು ತೆರೆಯಲು ಮತ್ತು ಬ್ಯಾಂಕುಗಳನ್ನು ತೆರೆಯಲು ಮಂಗಳೂರಿನ ಕೆನರಾ ವಿದ್ಯಾ ಸಂಸ್ಥೆಗಳ ಮತ್ತು ಕೆನರಾ ಬ್ಯಾಂಕಿನ ಸ್ಥಾಪಕರಾದ ಅಮ್ಮೆಂಬಳ ಸುಬ್ಬರಾಯ ಪೈಗಳಿಗೆ ಪ್ರೇರಣೆ ನೀಡಿದುದು ಕೂಡ ಉಲ್ಲೇಖಾರ್ಹವಾಗಿದೆ.

(ಮುಂದುವರಿಯುವುದು...)

## ನಿಧನ

**ಶ್ರೀಮತಿ ಮೀನಾಕ್ಷಿ**

ತಾ.02.10.2021 ರಂದು ಬೆಳ್ಮಣ್ಣು ವಿಶ್ವನಾಥರಾಯರ ಪತ್ನಿ ಮೀನಾಕ್ಷಿ ನಿಧನರಾದರು.

★★★★ ★★★★

**ಬಡಿಲ ನಾಗರಾಜ್ ರಾವ್**

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ಕಾರ್ಯಕರ್ತ ಕಡಬ ನಿವಾಸಿ 30.09.2021ರಂದು ಬಡಿಲ ನಾಗರಾಜ್ ರಾವ್ ನಿಧನರಾದರು.

★★★★ ★★★★

**ಶ್ರೀಮತಿ ವಸಂತಿ**

ತಾ.02.10.2021 ರಂದು ದಿ.ಆಳುಗೆಲು ರಾಘವೇಂದ್ರರಾವ್ ರವರ ಪತ್ನಿ ಶ್ರೀಮತಿ ವಸಂತಿ ನಿಧನರಾದರು.

★★★★ ★★★★

**ಶ್ರೀಮತಿ ವೇದಾ**

ತಾ.02.10.2021 ರಂದು ಕಳತೂರು ಶ್ರೀನಿವಾಸರಾಯರ ಪತ್ನಿ ವೇದಾ ನಾಸಿಕದಲ್ಲಿ ನಿಧನರಾದರು.

★★★★ ★★★★

**ಪ್ರಭಾಕರ ಸ್ವಾಮಿ**

ತಾ.01.10.2021ರಂದು ಅದ್ಯಪಾಡಿ ಪ್ರಭಾಕರ ಸ್ವಾಮಿ ಬೆಂಗಳೂರಿನಲ್ಲಿ ನಿಧನರಾದರು.

## ಶುಭ ಜನನ

ಕೆ. ಭಾಗ್ಯಚಂದ್ರ ಪಾವಂಜೆ ಹಾಗೂ ವಾಗೇಶ್ವರಿ ಇವರ ಪುತ್ರ ಭರತ್ ಪಾವಂಜೆ ಹಾಗೂ ಸೊಸೆ ರಶ್ಮಿ (ಸಾಲಿಗ್ರಾಮ ಅಣ್ಣಪ್ಪಯ್ಯ ಹೆಬ್ಬಾರ್ ಮತ್ತು ಲಕ್ಷ್ಮೀ ಹೆಬ್ಬಾರ್ ಇವರ ಪುತ್ರಿ) ಇವರಿಗೆ 30.08.2021 ರಂದು ಗಂಡು ಮಗುವಿನ ಜನನವಾಗಿದೆ.

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-30ರಿಂದ

**ತಾ.24-10-2021 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.08-11-2021** ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)


**ತಾ.25-10-2021** ಮತ್ತು **ತಾ.09-11-2021** ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ತುಲಾ ಮಾಸದ ವಿಶೇಷ ದಿನಗಳು

| | | | |
|---|---|---|---|
| 17-10-2021 | ತುಲಾ ಸಂಕ್ರಮಣ | 04-11-2021 | ಅಮಾವಾಸ್ಯೆ, ದೀಪಾವಳಿ, ಧನಲಕ್ಷ್ಮೀ ಪೂಜೆ |
| 20-10-2021 | ಹುಣ್ಣಿಮೆ | 05-11-2021 | ಶರದೃತು ಕಾರ್ತಿಕ ಮಾಸದ ಶುಕ್ಲಪಕ್ಷಾರಂಭ, ಬಲಿಪೂಜೆ, ಅಂಗಡಿಪೂಜೆ, ಗೋಪೂಜೆ |
| 21-10-2021 | ಶರದೃತು ಅಶ್ವಯುಜ ಮಾಸದ ಕೃಷ್ಣಪಕ್ಷಾರಂಭ | 08-11-2021 | ಪ್ರಥಮ ಕಾರ್ತಿಕ ಸೋಮವಾರ |
| 24-10-2021 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 8.49 | 15-11-2021 | ಸರ್ವೈಕಾದಶಿ ದ್ವಿತೀಯ ಕಾರ್ತಿಕ ಸೋಮವಾರ |
| 01-11-2021 | ಸರ್ವೈಕಾದಶಿ | 16-11-2021 | ವೃಶ್ಚಿಕ ಸಂಕ್ರಮಣ ಉತ್ಥಾನ ದ್ವಾದಶಿ, ತುಳಸಿಪೂಜೆ |
| 03-11-2021 | ಸಾಯಂಕಾಲ ಜಲಪೂರಣ ಮಾರನೆಯ ದಿನ ಬೆಳಿಗ್ಗೆ 5.38ಕ್ಕೆ ತೈಲಾಭ್ಯಂಜನ, ನರಕ ಚತುರ್ದಶಿ | | |


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**



ಫೋನ್ : 2556536 (R), 2555466 (O), Mobile : 9845149521

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಎಮ್. ದೇವಾನಂದ್ ಭಟ್ Cell : 9845644556

**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೊ



ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655

*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

**Buying and selling shares as easy as checking your emails**
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
**ಯೆಶಸ್ವೀ ಎಂಟರ್‌ಪ್ರೈಸೆಸ್**
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams



## ಅನಿರುದ್ಧ ವಿ.ರಾವ್

ಅನಿರುದ್ಧ ವಿ.ರಾವ್ ಈ ಬಾರಿಯ ಎಸ್ಸೆಸ್ಸೆಲ್ಸಿ (2020–2021) ಪರೀಕ್ಷೆಯಲ್ಲಿ 618/625 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಮಂಗಳೂರಿನ ಕದ್ರಿಯ ಶ್ರೀ ಯು.ಎಸ್.ವಿವೇಕ್ ರಾವ್ ಮತ್ತು ಕಲಾನಿಧಿಯವರ ಸುಪುತ್ರ ಹಾಗೂ ಮಂಗಳೂರಿನ ಸಂತ ಅಲೋಶಿಯಸ್ ಶಾಲೆಯ ವಿದ್ಯಾರ್ಥಿ.



ಡಾ। ಸ್ವರ್ಣಲತಾ ರಾವ್ ಉಡುಪಿಯ ಬಿ.ಆರ್.ಶೆಟ್ಟಿ ಹೆಣ್ಮಕ್ಕಳ ಆಸ್ಪತ್ರೆಯ ಅಧೀಕ್ಷಕಿಯಾಗಿ ನೇಮಕವಾಗಿದ್ದಾರೆ. ಇವರು ಉಡುಪಿಯ ಆಯುಷ್ ಇಲಾಖೆಯ ಮುಖ್ಯಸ್ಥ ಡಾ। ಶ್ಯಾಮರಾವ್‌ರವರ ಪತ್ನಿ



ಶ್ರೀ ಮಾರ್ಪಳ್ಳಿ ಪ್ರಸಾದ್ ಇವರು ದಾವಣಗೆರೆಯ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ವಿದ್ಯಾನಿಲಯದ ಪ್ರಾಂಶುಪಾಲರಾಗಿ ನೇಮಕವಾಗಿದ್ದಾರೆ. ಇವರು ಶಿವಮೊಗ್ಗದ ಶ್ರೀ ಮಂಜುನಾಥ ಮಾರ್ಪಳ್ಳಿಯವರ ಪುತ್ರ.

## ಶ್ರೀಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ. 31017, ಭೂವರಾಹ ಸಂಕೀರ್ಣ, ವಾದಿರಾಜ ರಸ್ತೆ, ಉಡುಪಿ–576101. ದೂರವಾಣಿ : 2522408

### ಬ್ರಹ್ಮಾವರ ಶಾಖೆಯ ಉದ್ಘಾಟನಾ ಸಮಾರಂಭದ ಆತ್ಮೀಯ ಕರೆಯೋಲೆ

ದಿನಾಂಕ : 07–11–2021ನೇ ರವಿವಾರ ಸಮಯ : ಪೂರ್ವಾಹ್ನ 10.30 ಗಂಟೆಗೆ
ಸ್ಥಳ : ಪ್ರಥಮ ಮಹಡಿ, ಕುಬೇರ ಟವರ್, ಹಳೆ ಬಸ್‌ಸ್ಟ್ಯಾಂಡ್ ರಸ್ತೆ, ಬ್ರಹ್ಮಾವರ
ಸಭಾ ಕಾರ್ಯಕ್ರಮ : ಚಾಂತಾರು ಗ್ರಾಮ ಪಂಚಾಯತ್ ಸಭಾಂಗಣ, ಬ್ರಹ್ಮಾವರ

ಉದ್ಘಾಟಕರು : **ಸನ್ಮಾನ್ಯ ಶ್ರೀ ಕೆ. ರಘುಪತಿ ಭಟ್,** ಶಾಸಕರು, ಉಡುಪಿ ವಿಧಾನಸಭಾ ಕ್ಷೇತ್ರ

ಅಧ್ಯಕ್ಷತೆ : **ಶ್ರೀ ಎಂ.ಸದಾನಂದ ರಾವ್**
ಅಧ್ಯಕ್ಷರು, ಶ್ರೀಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ.), ಉಡುಪಿ

ಮುಖ್ಯ ಅತಿಥಿಗಳು : **ಶ್ರೀ ಬಿ.ಮಂಜುನಾಥ ರಾವ್,** ಅಧ್ಯಕ್ಷರು,
ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ, ಬ್ರಹ್ಮಾವರ ತಾಲೂಕು, ಉಡುಪಿ ಜಿಲ್ಲೆ
**ಶ್ರೀ ಪ್ರವೀಣ್ ಬಿ. ನಾಯಕ್,** ಸಹಕಾರ ಸಂಘಗಳ ಉಪನಿಬಂಧಕರು, ಉಡುಪಿ ಜಿಲ್ಲೆ
**ಶ್ರೀ ಅರುಣ್‌ಕುಮಾರ್ ಎಸ್.ವಿ**
ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕುಂದಾಪುರ, ಉಡುಪಿ ಜಿಲ್ಲೆ
**ಶ್ರೀಮತಿ ಮೀರಾ ಸದಾನಂದ ಪೂಜಾರಿ**
ಅಧ್ಯಕ್ಷರು, ಚಾಂತಾರು ಗ್ರಾಮ ಪಂಚಾಯತ್, ಬ್ರಹ್ಮಾವರ.
**ಶ್ರೀ ಅಶೋಕ್ ಭಟ್**
ಅಧ್ಯಕ್ಷರು, ಬ್ರಹ್ಮಾವರ ತಾಲೂಕು ಬ್ರಾಹ್ಮಣ ಮಹಾಸಭಾ, ಬ್ರಹ್ಮಾವರ, ಉಡುಪಿ
**ಶ್ರೀ ವೆಂಕಟರಮಣ ಶೆಟ್ಟಿ ಎಚ್,** ಉದ್ಯಮಿ, ಕಟ್ಟಡ ಮಾಲೀಕರು, ಬ್ರಹ್ಮಾವರ

ತಮಗೆಲ್ಲರಿಗೂ ಆದರದ ಸ್ವಾಗತ ಬಯಸುವ

| | | |
|---|---|---|
| **ಶ್ರೀ ಎಂ.ಸದಾನಂದ ರಾವ್** | **ಶ್ರೀಮತಿ ಭಾರತಿ ಎಸ್.ರಾವ್** | **ಶ್ರೀ ಎನ್. ಪಟ್ಟಾಭಿರಾಮ** |
| ಅಧ್ಯಕ್ಷರು | ಶಾಖಾ ವ್ಯವಸ್ಥಾಪಕರು | ಕಾರ್ಯದರ್ಶಿ |

ಹಾಗೂ ಆಡಳಿತ ಮಂಡಳಿಯ ನಿರ್ದೇಶಕರು, ಸರ್ವ ಸದಸ್ಯರು, ಸಿಬ್ಬಂದಿ ವರ್ಗ.

**ಆಡಳಿತ ಮಂಡಳಿ :** ಶ್ರೀ ಎಂ.ಸದಾನಂದ ರಾವ್ (ಅಧ್ಯಕ್ಷರು), ಶ್ರೀ ಯು. ಅರವಿಂದ ಕುಮಾರ್ (ಉಪಾಧ್ಯಕ್ಷರು)
**ನಿರ್ದೇಶಕರು :** ಶ್ರೀ ಪ್ರಫುಲ್ಲಚಂದ್ರ ರಾವ್, ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು, ಶ್ರೀ ಬಿ.ಜಯರಾಮ ರಾವ್, ಶ್ರೀ ವೈ.ಮೋಹನ್ ರಾವ್, ಶ್ರೀ ಬಿ. ಕೃಷ್ಣಮೂರ್ತಿ ರಾವ್, ಶ್ರೀ ಕೆ.ಗಣೇಶ್ ರಾವ್, ಶ್ರೀ ವೈ.ವಿಠಲ ರಾವ್, ಶ್ರೀ ಎಂ. ಪದ್ಮಾನಂದ ರಾವ್, ಶ್ರೀಮತಿ ವೇದಾವತಿ ಡಿ. ರಾವ್

ಪ್ರಧಾನ ಕಛೇರಿ : ಶ್ರೀ ಭೂವರಾಹ ಸಂಕೀರ್ಣ, ವಾದಿರಾಜ ರಸ್ತೆ, ಉಡುಪಿ – 576101. ದೂರವಾಣಿ : 2522408
ಪಡುಬಿದ್ರಿ ಶಾಖೆಗಳು : ಮೊದಲ ಮಹಡಿ, ಗೋಪಾಲ ಸಂಕೀರ್ಣ, ಕಾರ್ಕಳ ರಸ್ತೆ, ಪಡುಬಿದ್ರಿ–574411
ದೂರವಾಣಿ : 2556608/9380063176
ಕೋಟೇಶ್ವರ ಶಾಖೆ : ಶ್ರೀರಾಮ ಸಂಕೀರ್ಣ, 1ನೇ ಮಹಡಿ, ಮುಖ್ಯರಸ್ತೆ, ಕೋಟೇಶ್ವರ, ದೂರವಾಣಿ : 9341854114

## ಶ್ರೀಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ. 31017, ಭೂವರಾಹ ಸಂಕೀರ್ಣ, ವಾದಿರಾಜ ರಸ್ತೆ, ಉಡುಪಿ–576101. ದೂರವಾಣಿ : 2522408

### 2020–2021 ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

ಮಾನ್ಯ ಸದಸ್ಯರೇ,

**ನಮ್ಮ ಸಂಘದ 2020–2021ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.20–11–2021ನೇ ಶನಿವಾರ ಅಪರಾಹ್ನ ಗಂಟೆ 03.30ಕ್ಕೆ ಸರಿಯಾಗಿ ನಮ್ಮ ಕಛೇರಿಯಿರುವ ಭೂವರಾಹ ಸಂಕೀರ್ಣದ ಸಭಾಂಗಣ**ದಲ್ಲಿ ನಡೆಯಲಿರುವುದು. ಮಾನ್ಯ ಸದಸ್ಯರೆಲ್ಲರೂ ಸಕಾಲದಲ್ಲಿ ಹಾಜರಿದ್ದು ಸಭೆಯ ನಡಾವಳಿಗಳಲ್ಲಿ ಭಾಗಿಗಳಾಗಬೇಕಾಗಿ ವಿನಂತಿ.

ಆಡಳಿತ ಮಂಡಳಿಯ ನಿರ್ಣಯದಂತೆ

ಎಂ. ಸದಾನಂದ ರಾವ್ (ಅಧ್ಯಕ್ಷರು)  ಪಟ್ಟಾಭಿರಾಮ ಎನ್.ಎಸ್. (ಕಾರ್ಯದರ್ಶಿ )

**ಕಾರ್ಯಕ್ರಮ ಸೂಚಿ**

1. ಪ್ರಾರ್ಥನೆ
2. ಸ್ವಾಗತ ಭಾಷಣ
3. ಮಹಾಸಭೆಯ ನೋಟೀಸನ್ನು ಓದಿ ಅಂಗೀಕರಿಸುವುದು.
4. ತಾ.06–12–2020 ರಂದು ಜರಗಿದ ಮಹಾಸಭೆಯ ವರದಿಯ ಅಂಗೀಕಾರ.
5. 2020–2021ನೇ ಸಾಲಿನ ವಾರ್ಷಿಕ ವರದಿಯ ಅಂಗೀಕಾರ.
6. 2020–2021ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳ ಮಂಡನೆ ಮತ್ತು ಅಂಗೀಕಾರ.
7. 2020–2021ನೇ ಸಾಲಿನ ಅಂದಾಜು ಆಯ–ವ್ಯಯ ತಃಖ್ತೆಗಿಂತ ಹೆಚ್ಚಾದ ವೆಚ್ಚಗಳ ಪರಿಶೀಲನೆ ಮತ್ತು ಮಂಜೂರಾತಿ.
8. 2021–2022ನೇ ಸಾಲಿನ ಅಂದಾಜು ಆಯ–ವ್ಯಯ ಪಟ್ಟಿಯ ಅಂಗೀಕಾರ.
9. 2020–2021ನೇ ಸಾಲಿನ ನಿವ್ವಳ ಲಾಭದ ಹಂಚಿಕೆ.
10. 2021–2022ನೇ ಸಾಲಿಗೆ ಶಾಸನಾತ್ಮಕ ಲೆಕ್ಕ ಪರಿಶೋಧಕರ ನೇಮಕ
11. ಅಧ್ಯಕ್ಷರ ಅನುಮತಿ ಮೇರೆಗೆ ಮಹಾಸಭೆಯ ವ್ಯಾಪ್ತಿಗೆ ಒಳಪಟ್ಟು ಬರಬಹುದಾದ ಇತರ ವಿಷಯಗಳು
12. ವಂದನಾರ್ಪಣೆ
13. ರಾಷ್ಟ್ರಗೀತೆ

ವಿ.ಸೂ. :
1. ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳೇನಾದರೂ ಇದ್ದಲ್ಲಿ ಮಹಾಸಭೆಯ ದಿನಾಂಕದ 7 ದಿನಗಳ ಮೊದಲು ಸಂಘದ ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು.
2. ಲಾಭಾಂಶ ಹಾಗೂ ಪಾಲು ಪತ್ರ ಪಡೆಯದ ಸದಸ್ಯರು ಕಛೇರಿ ಸಮಯದಲ್ಲಿ ಪಡೆಯಬೇಕಾಗಿ ವಿನಂತಿ. ಇಲ್ಲದಿದ್ದಲ್ಲಿ 5 ವರ್ಷಕ್ಕೆ ಮೇಲ್ಪಟ್ಟು ಪಡೆಯದಿರುವ ಲಾಭಾಂಶದ ಹಣವನ್ನು ನಿಯಮದಂತೆ ಸೊಸೈಟಿಯ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು.
3. ಸಹಕಾರ ಕಾಯ್ದೆ ಹಾಗೂ ಸಂಘದ ಉಪನಿಯಮಗಳ್ವಯ ಸದಸ್ಯರು 5 ಮಹಾಸಭೆಗಳಲ್ಲಿ ಕಡ್ಡಾಯವಾಗಿ 3 ಮಹಾಸಭೆಗಳಿಗೆ ಹಾಜರಾಗಬೇಕು ಮತ್ತು ಸತತ 3 ವರ್ಷಗಳ ಕಾಲ ನಿಗದಿತ ಕನಿಷ್ಠ ವ್ಯವಹಾರವನ್ನು ಮಾಡಬೇಕಾಗಿದ್ದು, ತಪ್ಪಿದಲ್ಲಿ ಅಂತಹ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ.
4. ಸದಸ್ಯರೆಲ್ಲರೂ ಮಾಸ್ಕ್ ಧರಿಸಿ, ಸರಕಾರದ ಆದೇಶವನ್ನು ಪಾಲಿಸಬೇಕಾಗಿ ವಿನಂತಿ.

## –: ಶುಭಾಶಯಗಳು :–

**"ಶ್ರೀ ಶಾರದಾಂಬೆಗೆ ವಂದಿಸುತ್ತಾ "ಶ್ರೀ ಶಾರದಾ" ಪತ್ರಿಕೆಯು ನವರಸಭರಿತಳಾಗಿ ಸಮಾಜಕ್ಕೆ ದಾರಿದೀಪವಾಗಲಿ" ಎಂದು ಹಾರೈಸುವ**

**ಜಿ.ಕೆ.ಕೋಲ್ವೆ, ಉಡುಪಿ**
ಮಹಾಪೋಷಕರು, ಶ್ರೀಶಾರದಾ ಪತ್ರಿಕೆ ಹಾಗೂ ಮಾಜಿ ಉಪಾಧ್ಯಕ್ಷರು, ಶ್ರೀ ಸ್ಥಾನಿಕ ಬ್ರಾಹ್ಮಣಮಹಾಮಂಡಲ


*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com


**JALAJA SKIN CLINIC**
1ST FLOOR, SAI HARSHA SQUARE, KOLADAPETE (THENKAPETE), OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.



**With Best Compliments From :**

**BUILDING DREAMS, ENHANCING LIVES.**









Land® Trades
BUILDERS & DEVELOPERS
BUILDING TRUST, DELIVERING VALUE

NAKSHATRA — GANDHINAGAR —
SOLITAIRE — HATHILL, —
HABITAT ONE 54 An Urban Lifestyle — DEREBAIL —
ANANTESSH — CAR STREET, —
MANGALURU'S LEADING REAL ESTATE COMPANY
RESIDENTIAL | COMMERCIAL | PLOTS

For More Details : 8882 777 444 | 0824 2425424, 2423866 | www.landtrades.in
Follow us on :

## ಸ್ಥಾನಿಕ ಮಹಾಮಂಡಲ ರಿ. ಮಂಗಳೂರು – ವಾರ್ಷಿಕ ಮಹಾಸಭೆ

# ಸ್ಥಾನಿಕ ಬ್ರಾಹ್ಮಣ ಅರ್ಹ ವಿದ್ಯಾರ್ಥಿಗಳಿಗೆ ಪುತ್ತೂರು ಅಂಬಿಕಾ ವಿದ್ಯಾಲಯದಲ್ಲಿ ಉಚಿತ ಶಿಕ್ಷಣ : ಶ್ರೀ ಸುಬ್ರಹ್ಮಣ್ಯ ನಟ್ಟೋಜ

ಸ್ಥಾನಿಕ ಮಹಾಮಂಡಲ (ರಿ.) ಮಂಗಳೂರು ಇದರ 9ನೇ ವರುಷದ ವಾರ್ಷಿಕ ಮಹಾಸಭೆ, ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ, ನೂತನ ಕಛೇರಿ ಉದ್ಘಾಟನೆ, ಸಾಂಸ್ಕೃತಿಕ ಕಾರ್ಯಕ್ರಮಗಳು ನೂತನ ಅಧ್ಯಕ್ಷರೂ ಸಮಾಜದ ಉತ್ತಮ ಸಂಘಟಕರೂ ಆದ ಬೆಳ್ವಾಯಿ ಶ್ರೀ ದೇವಾನಂದ್ ಭಟ್ ಇವರ ಅಧ್ಯಕ್ಷತೆಯಲ್ಲಿ ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಜರಗಿತು.

ಪೂರ್ವಾಹ್ನ ಗಂಟೆ 9:00ರಿಂದ ಕಾರ್ಕಳ ಅನಂತಪದ್ಮನಾಭ ಭಟ್ ಬಳಗದವರಿಂದ ದಾಸ ಸಾಹಿತ್ಯ ಸಂಗೀತ ಕಾರ್ಯಕ್ರಮ ಆರಂಭಗೊಂಡಿತು. ಮಹಾಸಭೆಯ ಉದ್ಘಾಟನೆಯನ್ನು ಪ್ರತಿಷ್ಠಿತ ಪುತ್ತೂರು ನಟ್ಟೋಜ ಮನೆತನದವರು ಹಾಗೂ ಅಂಬಿಕಾ ವಿದ್ಯಾಸಮೂಹ ಸಂಸ್ಥೆಯ ಸ್ಥಾಪಕರೂ ಆದ ಶ್ರೀ ಸುಬ್ರಹ್ಮಣ್ಯ ನಟ್ಟೋಜರವರು ನೆರವೇರಿಸಿ "ನಮ್ಮ ದೇಶದ ಸಾಂಸ್ಕೃತಿಕವ್ಯವಸ್ಥೆಯನ್ನು ಬುಡಮೇಲು ಮಾಡಿದ ಆ ಕಾಲದ ಬ್ರಿಟಿಷ್ ಆಡಳಿತದಲ್ಲೂ ಸ್ಥಾನಿಕರ ಸ್ಥಾನಮಾನಕ್ಕೆ ಕುತ್ತು ಬಂತು. ಮುಂದೆ ಮೇಖಲೆ ಶಿಕ್ಷಣ ಪದ್ಧತಿಯಿಂದ ಎಲ್ಲಾ ಭಾರತೀಯ ಸಂಸ್ಕೃತಿ ಅಧ:ಪಥನ ಕಂಡಾಗಲೂ ಹಿಂದೂ ಸಂಸ್ಕೃತಿ ಎಲ್ಲವನ್ನೂ ಮರೆತು ಮೆಟ್ಟನಿಂತು ಮತ್ತೆ ಜೀವಂತಿಕೆ ತಳೆದು ಸ್ವಸಾಮರ್ಥ್ಯದಿಂದ ತಲೆಯೆತ್ತಿ ಮುಂದುವರಿಯಿತು. ಇದನ್ನು ಎಲ್ಲರೂ ಮೆಚ್ಚಿಕೊಂಡರು. ಇದರಂತೆ ನಮ್ಮ ಸಮಾಜವು ಕೂಡ ಶೃಂಗೇರಿ ಪೂಜ್ಯ ಶ್ರೀಗಳೇ ಆಶೀರ್ವಚಿಸಿದಂತೆ ಪಂಚದ್ರಾವಿಡ ಬ್ರಾಹ್ಮಣರಲ್ಲಿ ಸ್ಥಾನಿಕ ಬ್ರಾಹ್ಮಣರು, ಕೋಟ, ಶಿವಳ್ಳಿ, ಹವ್ಯಕ, ಕರಾಡ ಹೀಗೆಂದು ಸೂಚಿಸಿ ಅಗ್ರ ಪಂಕ್ತಿಯಲ್ಲಿ ಇರುವ ನಮ್ಮವರ ಕಾರ್ಯ, ಸೇವಾ ತತ್ಪರತೆ ಶ್ಲಾಘನೀಯ ಎಂದು ತಿಳಿಸಿರುತ್ತಾರೆ. ಇದು ನಮಗೆ ನಮ್ಮ ಸಮಾಜಕ್ಕೆ ಸಂದ ಗೌರವ. ನಮಗೆ ಸಮಾಜ ಏನು ಕೊಟ್ಟಿತು ಎಂಬುದಕ್ಕಿಂತ ನಾವು ಸಮಾಜಕ್ಕೆ ಏನು ಕೊಟ್ಟೆವು ಎನ್ನುವುದು ಮುಖ್ಯ. ಆ ನೆಲೆಯಲ್ಲಿ ನಮ್ಮ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಸೂಚಿಸಿದ



ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ಪುತ್ತೂರಿನ ನಮ್ಮ ಅಂಬಿಕಾ ವಿದ್ಯಾಲಯದಲ್ಲಿ ಉಚಿತ ಶಿಕ್ಷಣ ನೀಡುವ ಆಶ್ವಾಸನೆ ನೀಡುತಿದ್ದೇನೆ. ವರುಷ ಒಂದಕ್ಕೆ ಸಾಮಾನ್ಯ ಒಂದೂವರೆಯಿಂದ ಎರಡು ಲಕ್ಷ ವೆಚ್ಚ ತಗಲುವ ಈ ವ್ಯವಸ್ಥೆ ನಮ್ಮ ಸಮಾಜದ ಪೋಷಕರಿಗೆ ಉಪಯುಕ್ತವಾಗಲಿ. ಮಕ್ಕಳ ಭವಿಷ್ಯ ಉಜ್ವಲವಾಗಲಿ, ಶ್ರೀ ದೇವಾನಂದ ಭಟ್ ಅಧ್ಯಕ್ಷತೆಯಲ್ಲಿ ಮಹಾಮಂಡಲ ಸಮಿತಿಯು ಸಮಾಜದ ಉತ್ತಮ ಕೆಲಸಗಳಲ್ಲಿ ಮುಂದುವರೆಯಲಿ" ಎಂದು ಶುಭ ಹಾರೈಸಿದರು. ಮಂಗಳೂರು ಮಹಾನಗರ ಪಾಲಿಕೆಯ ಶ್ರೀಮತಿ ಸುಮಂಗಲ ಸುಧೀರ್ ಕೇದಗೆಯವರು ಮಂಡಲಕ್ಕೆ ಶುಭಹಾರೈಸಿ "ಕೈಯ ಹತ್ತು ಬೆರಳುಗಳು ಜೊತೆಯಾಗಿ ಸೇರಿ ಕೆಲಸ ಮಾಡುವಂತೆ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ನೂತನ ಅಧ್ಯಕ್ಷರಾದಿಯಾಗಿ ಪದಾಧಿಕಾರಿಗಳು ಸದಸ್ಯರು ಎಲ್ಲರೂ ಸೇರಿ ಸಮಾಜ ಕಟ್ಟುವ ಕಾರ್ಯ ಮಾಡಲಿ, ಇದಕ್ಕೆ ನಮ್ಮೆಲ್ಲರ ಸಹಕಾರ ಇದೆ. ಎಲೆ ಮರೆಯ ಕಾಯಿಯಂತೆ ನಮ್ಮ ಸಮಾಜದ ಬಂಧುಗಳಿಗೆ ಸಹಾಯ ಮಾಡುವ ಮಂಡಲವು ಇನ್ನಷ್ಟು ವೃದ್ಧಿ ಹೊಂದಲಿ" ಎಂದು ಶುಭಾಶಂಸನೆಗೈದರು. ಗೌರವದ ಮೇಯರ್ ಹುದ್ದೆ ಏರಿದ ನಮ್ಮ ಸಮಾಜದ ಮಹಿಳೆ ಎಂಬ ನೆಲೆಯಿಂದ ಮಂಡಲವು ಅವರನ್ನು ಗೌರವಿಸಿ ಸನ್ಮಾನಿಸಿತು. ಶ್ರೀ ಸುಬ್ರಹ್ಮಣ್ಯ ಸಭಾದ ಮೇಲಂತಸ್ತಿನಲ್ಲಿ ನೂತನ ಮಹಾಮಂಡಲದ ಕಛೇರಿಯನ್ನು ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಗೆ ಉದ್ಘಾಟಿಸಿದರು, ಜೊತೆಗೆ ಸಭಾದ ಪ್ರಧಾನ ಕಾರ್ಯದರ್ಶಿ ಶ್ರೀ ಕರುಣ್‌ರಾವ್ ಬೆಳ್ಳೆ ದೀಪ ಪ್ರಜ್ವಲನೆಗೈದರು. ಈ ಸಂದರ್ಭದಲ್ಲಿ ಅವರನ್ನು ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಹರ್ಷ ಕುಮಾರ್ ಕೇದಗೆಯವರು ಮಹಾಮಂಡಲಕ್ಕೆ ರೂ ಇಪ್ಪತ್ತೈದು ಸಾವಿರ ನೀಡಿ ಸದಸ್ಯರಾದರು. ಡಾ.ವಿದ್ವಾನ್ ಗಾಳಿಮನೆ ವಿನಾಯಕ ಭಟ್ "ಆಧುನಿಕತೆಯಲ್ಲಿ ಬ್ರಾಹ್ಮಣ್ಯ" ಎಂಬ ವಿಷಯದಲ್ಲಿ ಉಪನ್ಯಾಸ ನೀಡಿ ಬ್ರಾಹ್ಮಣರಲ್ಲಿ ಇರಬೇಕಾದ ಕರ್ತವ್ಯ, ಅನುಷ್ಠಾನ, ಮಾತ್ರವಲ್ಲದೇ ಬರುವ ಆತಂಕ, ಜಿಜ್ಞಾಸೆಗಳ ಬಗ್ಗೆ ಸವಿವರವಾಗಿ ನುಡಿದರು. ಸಮಾಜದ ಬಂಧುಗಳಿಗೆ ಪೋಷಕ ಧನ ಸಹಾಯ ರೂಪಾಯಿ ಮೂರು ಸಾವಿರದಂತೆ ಬೇರೆ ಬೇರೆ ಸಂಘಗಳ ಹದಿನೈದು ಜನರಿಗೆ ನೀಡಿ ಪ್ರೋತ್ಸಾಹಿಸಲಾಯಿತು.

ಪದಗ್ರಹಣ ನೆರವೇರಿಸಿದ ಪುತ್ತೂರು ಎನ್.ಎಸ್. ಜಗನ್ನಿವಾಸ ರಾವ್ ನೂತನ ಪದಾಧಿಕಾರಿಗಳಿಗೆ ಶುಭ ಹಾರೈಸಿದರು. ಸ್ಥಾಪಕಾಧ್ಯಕ್ಷರಾದ ಉಡುಪಿಯ ಶ್ರೀ ಸಿ.ಎಸ್.ರಾವ್ ಮಾತಾಡಿ ಮಂಡಲ ಬೆಳೆದು ಬಂದ ಹಾದಿ ನೆನಪಿಸಿ ಮುಂದೆ ಯೋಗ್ಯ ಹೆಜ್ಜೆಯೊಂದಿಗೆ ಎಲ್ಲರ ವಿಶ್ವಾಸಗಳಿಸಿ ಬೆಳೆಯಲಿ ಎಂದು ಹಾರೈಸಿದರು. ಅಧ್ಯಕ್ಷ ಸ್ಥಾನದಿಂದ ಎಂ.ದೇವಾನಂದ ಭಟ್ ಮಾತಾಡಿ ಮುಂದೆ ಮಹಾಮಂಡಲದ ಕಾರ್ಯಯೋಜನೆಗಳ ಬಗ್ಗೆ ವಿವರಿಸಿ ಅನೇಕ ಕಡೆಗಳಲ್ಲಿ ನಮ್ಮ ಸಂಘಟನೆ ಗಟ್ಟಿ ಯಾಗಬೇಕು. ಬೇರೆ ಕಡೆಯಲ್ಲಿಯೂ ನಮ್ಮವರು ಸಂಘ ಕಟ್ಟಲು ಪ್ರೋತ್ಸಾಹಿಸಬೇಕು. ನಿವೇಶನವನ್ನು ಪ್ರತೀ ಸಂಘ ಸ್ವಂತವಾಗಿ ಹೊಂದಬೇಕು. ಅಸಹಾಯಕರಿಗೆ ಧನ ಸಹಾಯ ಮಾಡುತ್ತಾ ಸಮಾಜದಲ್ಲಿ ಅವರನ್ನು ಮೇಲೆತ್ತುವ ಕಾರ್ಯ ಆಗಬೇಕು. ಇದಕ್ಕೆ ಸಮಾಜದ ಸಹಕಾರ ಆಶೀರ್ವಾದ ನಮ್ಮ ಹೊಸ ಆಡಳಿತಕ್ಕೆ ಅಗತ್ಯ ಬೇಕು ಎಂದು ಕೇಳಿಕೊಂಡರು.

ವಾರ್ಷಿಕ ವರದಿಯನ್ನು ಪ್ರಧಾನ ಕಾರ್ಯದರ್ಶಿ ಉಡುಪಿಯ ಡಾ। ವೈ.ಸುದರ್ಶನ್ ರಾವ್ ವಾಚಿಸಿದರು. 2020–2021ರ ಸಾಲಿನ ಲೆಕ್ಕಪತ್ರಗಳನ್ನು ನಿಕಟಪೂರ್ವ ಕೋಶಾಧಿಕಾರಿಯವರಾದ ಶ್ರೀ ಉದಯಕುಮಾರ್ ಮಂಗಳೂರು ಮಂಡಿಸಿ ಅನುಮೋದನೆ ಪಡೆದರು. ಶ್ರೀಮತಿ ರಮ್ಯಾ ಅರುಣ್ ರಾವ್ ಮುಂಡ್ಕೂರು ನಿರೂಪಣೆಗೈದ ಕಾರ್ಯಕ್ರಮದಲ್ಲಿ ಧನ್ಯವಾದ ನೀಡಿದವರು ಉಪಾಧ್ಯಕ್ಷರಾದ ಶ್ರೀ ಉದಯ ಬಾರಕೂರು. ಮುಂದೆ ಭೋಜನ ಕೂಟದ ಬಳಿಕ ಎಮ್.ದೇವಾನಂದ ಭಟ್ ಸಂಯೋಜನೆಯಲ್ಲಿ ಸಮಾಜ ಬಾಂಧವರಿಂದ ಯಕ್ಷಗಾನ "ಗದಾ ಯುದ್ಧ" ಜರಗಿತು ಹೀಗೆ ದಿನಪೂರ್ತಿ ಜರಗಿದ ಮಹಾಮಂಡಲದ ಕಾರ್ಯಕ್ರಮದಲ್ಲಿ ನಮ್ಮ ಸಮಾಜದ 15 ಸಂಘಗಳಲ್ಲಿ 12 ಸಂಘದ ಅಧ್ಯಕ್ಷರು ವೇದಿಕೆಯಲ್ಲಿ ಉಪಸ್ಥಿತರಿದ್ದು ಬೇರೆ ಬೇರೆ ಪ್ರದೇಶಗಳಿಂದ ಆಗಮಿಸಿದ ಮುನ್ನೂರಕ್ಕೂ ಹೆಚ್ಚು ಸಮಾಜ ಬಾಂಧವರು ಭಾಗವಹಿಸಿದ್ದರು.

PRODUCTS ARE AVAILABLE AT ATTRACTIVE DISCOUNT PRICES




BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990



ಡಾ। ವಿಜಯಾ ರಾವ್ ವೈ.ಬಿ
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು

**Dr. Vijaya Rao Y.B.**
MBBS DGO (DNB)
Consultant Obst. & Gynaecologist
Reg. No. 34499
Mobile : 9481230608
Email : vijayayb12@gmail.com

Indrani Maternity Clinic, Aisiri Complex,
Near Railway Station Bus Stop, Kunjibettu Post, Udupi - 576 102

## ಡಾ। ಹರೀಶ್ ಜೋಶಿ ನಿರ್ಮಿಸಿದ ಎರೆಗೊಬ್ಬರ ತೊಟ್ಟಿಗೆ ಪೇಟೆಂಟ್



ನಗರದ ಸೈಂಟ್ ಅಲೋಶಿಯಸ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ನಮ್ಮ ಸಮಾಜ ಬಾಂಧವರಾದ ಡಾ। ಎಸ್.ಹರೀಶ್ ಜೋಶಿ ಅವರು ಕಸ ವಿಲೇವಾರಿಗೆ ಸಂಬಂಧಪಟ್ಟ ವೈಜ್ಞಾನಿಕ ತಳಹದಿಯ ಮೇಲೆ ನಿರ್ಮಿಸಿದ ಗೃಹೋಪಯೋಗಿ ಎರೆಗೊಬ್ಬರ ತೊಟ್ಟಿಗೆ 2015 ರಿಂದ 20 ವರ್ಷಗಳವರೆಗೆ ಪೇಟೆಂಟ್ ದೊರಕಿದೆ. ಈ ಘಟಕವು ಫ್ರಾನ್ಸ್, ಇಂಗ್ಲೆಂಡ್ ಮತ್ತು ಅಮೆರಿಕದಲ್ಲಿರುವ ಎರೆತೊಟ್ಟಿಯಿಂದ ತೀರ ಭಿನ್ನವಾದುದು. ಸುಮಾರು ನಾಲ್ಕೈದು ವರ್ಷಗಳಿಂದ ಈ ಘಟಕ ಹಲವಾರು ವಿದ್ಯಾಸಂಸ್ಥೆ ಹಾಗೂ ಮನೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಎರೆತೊಟ್ಟಿಯು ಫೈಬರ್ ಗ್ಲಾಸ್ ನಿರ್ಮಿತ ಎರಡು ಕೋಣೆ ಹೊಂದಿದ್ದು, ಎರಡು ಹಂತದ ಎರೆಗೊಬ್ಬರ ಪ್ರಕ್ರಿಯೆ ಏಕಕಾಲದಲ್ಲಿ ಜರಗುವಂತೆ ವಿನ್ಯಾಸಗೊಳಿಸಲಾಗಿದೆ. ಈ ಸಣ್ಣ ಘಟಕಕ್ಕೆ ನಾಲ್ಕು ಸುತ್ತಲೂ ಹೊರಬದಿಯಲ್ಲಿ ಹಲವಾರು ರಂಧ್ರಗಳಿರುವ ಗಾಳಿ ಕೋಣೆಗಳಿದ್ದು, ಘಟಕಕ್ಕೆ ನಿರಂತರವಾಗಿ ಶುದ್ಧಗಾಳಿ ಒದಗಿಸುತ್ತದೆ. ಈ ಪ್ರಕ್ರಿಯೆಯು ಎರೆಹುಳು ಇರುವಿಕೆ ಮತ್ತು ಸಂತಾನಾಭಿವೃದ್ಧಿಗೆ ಸಹಾಯವಾಗುತ್ತದೆ. ಯಾವುದೇ ಸಂದರ್ಭದಲ್ಲಿ ಇರುವೆ, ಇಲಿ, ಹೆಗ್ಗಣ, ಹಾವು, ಕಪ್ಪೆ ಮತ್ತು ಪಕ್ಷಿಗಳ ಹಾವಳಿಯಿಂದ ಈ ಘಟಕ ಮುಕ್ತವಾಗಿದೆ . ಸ್ಮಾರ್ಟ್ ಎರೆತೊಟ್ಟಿಯಿಂದ ವರ್ಷವೊಂದಕ್ಕೆ 4 ರಿಂದ 5 ಬಾರಿ ಗೊಬ್ಬರವನ್ನು ಉತ್ಪಾದಿಸಬಹುದು. ಪ್ರತೀ ಬಾರಿ 20 ರಿಂದ 25 ಕೆ.ಜಿ.ಯಷ್ಟು ಗೊಬ್ಬರ ಪಡೆಯಬಹುದಾಗಿದೆ.




Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 2958444
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org